ವಿಜಯಪುರ | ಸಂಪುಟ 01 | ಸಂಚಿಕೆ 311 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ


ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com RNI NO: KARKAN/2023/86203 ಬುಧವಾರ, ಫೆಬ್ರವರಿ 07, 2024

“ಇಂದು ಕಾಂಗ್ರೆಸ್ ಹಮ್ಮಿಕೊಂಡಿರುವ ದೆಹಲಿ ಚಲೋ ಪ್ರತಿಭಟನೆ ನಗೆ ತರಿಸುವಂತಿದೆ. ತನ್ನ ಬಿಟ್ಟಿ ಭಾಗ್ಯಗಳಿಂದ ದಿವಾಳಿಯಾಗಿರೋ ರಾಜ್ಯ ಸರಕಾರ ಕೇಂದ್ರದ ಮೇಲೆ ಗೂಬೆ ಕೂರಿಸಲು ಹೊರಟಿದೆ. ಜನರೇ ಇದಕ್ಕೆ ತಕ್ಕ ಪಾಠ ಕಲಿಸ್ತಾರೆ”

ಉದಯರಶ್ಮಿ ದಿನಪತ್ರಿಕೆ



– ಡಾ. ಗೌತಮ್.ಆರ್.ಚೌಧರಿ
ಬಿಜೆಪಿ ಮುಖಂಡರು

ಚುನಾವಣಾ ಆಯೋಗ ಘೋಷಣೆ ।ಶರದ್ ಪವಾರ್ ಗೆ ತೀವ್ರ ಹಿನ್ನಡೆ । ಮಹಾರಾಷ್ಟ್ರ ರಾಜಕೀಯದಲ್ಲಿ ಸಂಚಲನ

# ಅಜಿತ್ ಪವಾರ್ ಬಣಕ್ಕೆ ಎನ್‌ಸಿಪಿ ಚಿಹ್ನೆ!



ನವದೆಹಲಿ: ಮಹಾರಾಷ್ಟ್ರದ ರಾಜಕೀಯದಲ್ಲಿ ದೊಡ್ಡ ಸಂಚಲನ ಉಂಟಾಗಿದ್ದು, ಚುನಾವಣಾ ಆಯೋಗವು ಅಜಿತ್ ಅವರ ಬಣ ನಿಜವಾದ ಎನ್‌ಸಿಪಿ ಎಂದು ಘೋಷಿಸಿದೆ.

ಚುನಾವಣಾ ಆಯೋಗದೊಂದಿಗೆ ಈ ಹೋರಾಟ ಬಹಳ ದಿನಗಳಿಂದ ನಡೆಯುತ್ತಿದ್ದು, ಶರದ್ ಪವಾರ್ ಅವರ ಕಡೆಯವರು ಕೂಡ ವಾದ ಮಂಡಿಸಿದ್ದರು. ಆದರೆ ಇದೀಗ ಅಲ್ಲಿಂದ ಅಜಿತ್ ಬಣಕ್ಕೆ ಜಯ ಸಿಕ್ಕಿದ್ದು ನಿಜವಾದ ಎನ್‌ಸಿಪಿ ಎಂದರೆ ಅಜಿತ್ ಬಣ ಎಂದು ಒತ್ತಿ ಹೇಳಿದೆ.


ಕಳೆದ ವರ್ಷವೇ, ಅಜಿತ್ ಬಣ ಬಂಡಾಯವೆದ್ದು ಎನ್‌ಸಿಪಿಯನ್ನು ಎರಡು ತುಂಡು ಮಾಡಿತ್ತು. ಅನೇಕ ಶಾಸಕರ ಜೊತೆಗೂಡಿ ಶಿಂಧೆ ಸರ್ಕಾರವನ್ನು ಬೆಂಬಲಿಸಿದರು. ಈ ಕಾರಣಕ್ಕೆ ಅಜಿತ್ ಉಪ ಮುಖ್ಯಮಂತ್ರಿಯೂ ಆದರು. ಆಗ ಅಜಿತ್ ಅವರು ನಿಜವಾದ ಎನ್‌ಸಿಪಿ ಎಂದು ಹೇಳಿಕೊಂಡಿದ್ದರು. ಇದರ ಹಿಂದಿನ ತರ್ಕವೆಂದರೆ ತಮಗೆ ಸಾಕಷ್ಟು ಶಾಸಕರ ಬೆಂಬಲವಿದೆ ಎಂದು ವಾದಿಸಿದ್ದರು. ಅದೇ ಸಮಯದಲ್ಲಿ, ಶರದ್ ಪವಾರ್ ಕೂಡ ತಮ್ಮ ಹಕ್ಕು ಮಂಡಿಸಿದ್ದರು. ಶರದ್ ಅಜಿತ್ ಅನ್ನು ಹೊರಹಾಕುವ ಕೆಲಸವನ್ನು ಮಾಡಿದ್ದಾರೆ.

ಆದರೆ ಇದೀಗ ಚುನಾವಣಾ ಆಯೋಗವು ಅಖಾಡದಲ್ಲಿನ ಎಲ್ಲಾ ಸಮೀಕರಣಗಳನ್ನು ಬದಲಾಯಿಸಿದೆ. ಇಸಿ ಅಜಿತ್ ಬಣಕ್ಕೆ ದೊಡ್ಡ ರಿಲೀಫ್ ನೀಡಿದ್ದು, ಅವರನ್ನು ನಿಜವಾದ ಎನ್‌ಸಿಪಿ ಎಂದು ಘೋಷಿಸಿದೆ.

## ರಾಜ ನುಡಿ

ಹಿರಿಯರು ಹೇಳಿದಂತೆ ಪೂಜೆ, ನಮಾಜ್, ಪ್ರೇಯರ್ ಗಳಲ್ಲಿ ಅವನನ್ನ ತುಂಬಾ ಹುಡುಕಿದೆ ಕೊನೆಗೆ ಅವನು ಸಿಕ್ಕಿದ್ದು ಪ್ರೇಮ, ಸೇವೆ, ಸ್ನೇಹ, ಸಹಾಯ, ಸಹಾನುಭೂತಿಯಲ್ಲಿ. ಎಲ್ಲೋ ಇರುವುದನ್ನು ಇನ್ನೆಲ್ಲೋ ಹುಡುಕುತ್ತಾ ಜೀವನ ಮುಗಿಸುತ್ತೇವೆ.

-ಡಾ. ರಾಜಶೇಖರ ನಾಗೂರ



## ವಚನ ಚಿಂತನ 295

**ಗುಹೇಶ್ವರ ಸಿಕ್ಕಿದ ಅಲ್ಲಮಂಗೆ.**

*ಶಿವ' ಎಂಬ ವಚನವ ಬಿಡದಿರಿ, ಮಡದಿಯರ ಒಲುಮೆಯ ನಚ್ಚದಿರಿ,*
*ದರ್ಪಣದ ಒಪ್ಪವ ತಪ್ಪದಿರಿ, ವಾಯುವ ಕಡೆಗಡೆಗೆ ತಿದ್ದದಿರಿ,*
*ಹಿಡಿವಡೆ ದೃಢವಾಗಿ ಹಿಡಿಯಿರೆಲವೊ,*
*ಗುಹೇಶ್ವರ ಸಿಕ್ಕಿದ ಅಲ್ಲಮಂಗೆ.*

– ಅಲ್ಲಮಪ್ರಭುಗಳು

ಇಷ್ಟಲಿಂಗದ ದೃಷ್ಟಿಯೋಗದಿಂದ ಉಂಟಾಗುವ ಪರಿಣಾಮವನ್ನು ಅಲ್ಲಮಪ್ರಭುಗಳು ಅನುಭವಿಸಿ ಬೆರಗಾಗಿದ್ದಾರೆ. ಬಸವಣ್ಣನವರ ಸಂಪರ್ಕ ಬಯಸಿ ಬಳ್ಳಿಗಾವಿಯಿಂದ ಕಲ್ಯಾಣಕ್ಕೆ ಬಂದ ಮೇಲೆ ಶರಣರ ಸಂಗದಲ್ಲಿ ತಾವು ಅನುಭವಿಸಿದ ಅನುಭಾವವನ್ನು ತಮ್ಮ ಒಂದು ವಚನದಲ್ಲಿ ಹೀಗೆ ವಿವರಿಸಿದ್ದಾರೆ, “ಅರಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ, ಬಯಸುವ ಬಯಕೆ ಕೈಸಾರಿದಂತೆ, ಬಡವ ನಿಧಾನವನೆಡಹಿ ಕಂಡಂತೆ, ನಾನರಸುತ್ತಲರಸುತ್ತ ಬಂದು ಭಾವಕ್ಕಗಮ್ಯವಾದ ಮೂರ್ತಿಯ ಕಂಡೆ ನೋಡಾ. ಎನ್ನ ಅರಿವಿನ ಹರುಹ ಕಂಡೆ ನೋಡಾ. ಎನ್ನ ಒಳಹೊರಗೆ ಎಡೆದೆರಹಿಲ್ಲದೆ ಥಳಥಳಿಸಿ ಬೆಳಗಿ ಹೊಳೆವುತಿಪ್ಪ ಅಖಂಡಜ್ಯೋತಿಯ ಕಂಡೆ ನೋಡಾ! ಕರುಹಳಿದ ಕರಸ್ಥಲದ ನಿಬ್ಬೆರಗಿನ ನೋಟದ ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರಾ” ಹೀಗೆ ಕರದಲ್ಲಿಕಂಡ ಮಹಾಲಿಂಗದ ಅಖಂಡ ಜ್ಯೋತಿಯ ಬೆಳಗನ್ನು ಸರ್ವರು ಕಾಣಲಿ ಎಂಬ ಕಳಕಳಿಯಿಂದ ಇಷ್ಟಲಿಂಗ ಪೂಜೆಯ ವಿಧಾನವನ್ನು ಈ ವಚನದಲ್ಲಿ ವಿವರಿಸಿದ್ದಾರೆ. “ಶಿವ ಎಂಬ ವಚನವು ಬಿಡದಿರಿ” ಎನ್ನುವಲ್ಲಿ ಇಷ್ಟಲಿಂಗ ಪೂಜಾ ನಿರತನಾದ ಸಾಧಕನು ಮನದಲ್ಲಿ ಪಠಿಸುವ ಓಂ ನಮಃ ಶಿವಾಯ ಎಂಬ ಮಂತ್ರವನ್ನು ನಿಲ್ಲಿಸದೆ ಲಿಂಗ ನಿರೀಕ್ಷೆ ಮಾಡಲು ಸೂಚಿಸಿದ್ದಾರೆ. “ಮಡದಿಯರ ಒಲುಮೆಯ ನಚ್ಚದಿರಿ,” ಎನ್ನುವಲ್ಲಿ ಶರಣ ಸತಿ ಲಿಂಗಪತಿ ಭಾವದಲ್ಲಿರುವ ಶರಣನು ಅಂಗದ ಇಚ್ಛೆಗೆ ಹೆಚ್ಚು ಗಮನಹರಿಸದಿರಿ ಎಂದಿದ್ದಾರೆ. “ವಾಯುವ ಕಡೆಗಡೆಗೆ ತಿದ್ದದಿರಿ” ಎಂಬುದು ಉಸಿರಿನ ಮೇಲೆ ನಿಯಂತ್ರಣವಿಡುತ್ತ ವಿವಿಧ ಚಕ್ರಗಳ ಜಾಗೃತಿಗೊಳಿಸಿ ಆಜ್ಞಾಚಕ್ರಕ್ಕೆ ಶಕ್ತಿ ಸಂಚಲನ ಗೊಳಿಸುವ ಪ್ರಕ್ರಿಯೆಮುಂದುವರೆಸಲು ಹೇಳಿದ್ದಾರೆ. ಈ ಪ್ರಕ್ರಿಯೆಯನ್ನು ಮಧ್ಯದಲ್ಲಿ ನಿಲ್ಲಿಸದಿರುವಂತೆ “ಹಿಡಿವಡೆ ದೃಢವಾಗಿ ಹಿಡಿಯಿರೆಲವೊ” ಎನ್ನುತ್ತಾ ಕುಂಡಲಿನಿ ಶಕ್ತಿ ಜಾಗೃತಿ ಮೂಡಿಸುವ ಪ್ರಕ್ರಿಯೆಯಲ್ಲಿ ಅವರು ಇಷ್ಟಲಿಂಗದಲ್ಲಿಯೇ ಮಹಾಲಿಂಗದ ದೃಷ್ಟವನ್ನು ಅನುಭವಿಸಿ ಸಂಭ್ರಮಿಸಿ ಹೊರಹೊಮ್ಮಿದ ಪದವೇ “ಗುಹೇಶ್ವರ ಸಿಕ್ಕಿದ ಅಲ್ಲಮಂಗೆ” ಎಂದಿರುವುದು ಇದು ಅಲ್ಲಮಪ್ರಭುಗಳಿಗೆ ಮಹಾಲಿಂಗ ದರ್ಶನವಾದ ಬಗ್ಗೆ ಸಾಕ್ಷಿ ನೀಡುವ ವಚನವಿದು. ಶರಣರ ಅನೇಕ ವಚನಗಳಲ್ಲಿ ಅನುಭಾವ ಪಡೆಯುವ ಹಂತಗಳನ್ನು ತಿಳಿಸಿದ್ದಾರೆ. ಅನುಸರಿಸಬೇಕಾಗಿದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಕಸ ವಿಲೇವಾರಿ ವಾಹನ ಬಾರದ್ದಕ್ಕೆ ಪುರಸಭೆಗೇ ಬಂದ ಕಸ!



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಕಸ ವಿಲೇವಾರಿ ವಾಹನ ಬರದ ಕಾರಣ ತಮ್ಮ ಮನೆಯ ಕಸವನ್ನು ತಂದು ಪುರಸಭೆ ಕಾರ್ಯಾಲಯದಲ್ಲಿ ಎಸೆದ ಘಟನೆ ಪಟ್ಟಣದಲ್ಲಿ ಮಂಗಳವಾರ ಬೆಳಿಗ್ಗೆ ನಡೆದಿದೆ.

ಪಟ್ಟಣದ ಹೊರಪೇಟ ಗಲ್ಲಿಯ ನಿವಾಸಿ ಮುತ್ತು ಪೂಜಾರಿ ಪುರಸಭೆ ಕಾರ್ಯಾಲಯದಲ್ಲಿ ಕಸ ಎಸೆಯುವ ಮೂಲಕ ಅಧಿಕಾರಿಗಳಿಗೆ ಎಚ್ಚರಿಸಿದ್ದಾನೆ. ಈ ಬಗ್ಗೆ ಮಾಧ್ಯಮದ ದೊಂದಿಗೆ ಮಾತನಾಡಿದ ಅವರು ಪುರಸಭೆಗೆ ವಾಹನವನ್ನು ಕಳಿಸಿ ಎಂದು ದಿನಂಪ್ರತಿ ಹೇಳಿ ವಾಹನ ಬರದೇ ಇರುವದಕ್ಕೆ ಇವತ್ತು ನನ್ನೊಬ್ಬನ ಮನೆಯ ಕಸವನ್ನು ತಂದು ಕಚೇರಿಯ ಒಳಗೆ ಹಾಕಿದ್ದೇನೆ. ಮುಂದಿನ ದಿನಗಳಲ್ಲಿ ಇದೇ ರೀತಿ ಮುಂದುವರೆದರೆ ಬಡಾವಣೆಯ ಸಾರ್ವಜನಿಕರ ಎಲ್ಲ ಕಸವನ್ನು ತಂದು ಪುರಸಭೆ ಕಚೇರಿಯ ಒಳಗೆ ಹಾಕಿ ಉಗ್ರವಾಗಿ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದರು.

ಪಟ್ಟಣದ ವಿದ್ಯಾನಗರದಲ್ಲಿಯೂ ಕೂಡ ಸುಮಾರು ದಿನಗಳಿಂದ ಕಸ ವಿಲೇವಾರಿ ವಾಹನ ಬರುತ್ತಿಲ್ಲ

> **“ಕಚೇರಿಯಲ್ಲಿ ಕಸವಿಲೇವಾರಿ ಮಾಡಿದ್ದಕ್ಕೆ ಪುರಸಭೆಯ ಎಸ್‌ಐ ಮಹಾಂತೇಶ ಕಟ್ಟೀಮನಿ ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕುತ್ತಾರೆ. ನನ್ನನ್ನು ನೋಡಿಕೊಳ್ಳುವ ಬದಲು ಕಸವಿಲೇವಾರಿ ವಾಹನ ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಂಡು ಪುಣ್ಯ ಕಟ್ಕೋಳಿ.”**
>
> –ಮುತ್ತು ಪೂಜಾರಿ. ಹೊರಪೇಟ ಗಲ್ಲಿಯ ನಿವಾಸಿ.

ಅತ್ಯಂತ ಸಮೀಪವಿರುವ ನಮ್ಮ ಬಡಾವಣೆಗೆ ಕಳೆದ 15 ದಿನಗಳಿಂದ ಕಸ ವಿಲೇವಾರಿ ವಾಹನ ಬಂದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ಕೇಳಿದರೆ ಇಲ್ಲದ ಕುಂಟು ನೆಪ ಹೇಳುತ್ತಾರೆ. ಸ್ವಚ್ಛ ಭಾರತ ಅಂತಾ ದೊಡ್ಡದಾಗಿ ಪ್ರಚಾರ ಮಾಡುವ ಇವರು 15 ದಿನಗಳ ವರೆಗೆ ಕಸವನ್ನು ಎಲ್ಲಿ ಇಟ್ಟುಕೊಂಡು ಕೂಡಬೇಕು? ಹಸಿ ಕಸ ಬೇರೆ ಮಾಡಿ ಒಣ ಕಸಬೇರೆ ಮಾಡಿ, ಸ್ವಚ್ಛತೆಯೇ ನಮ್ಮ ಸಂಸ್ಕಾರ ಎಂದು ಹಾಡು ಬರುತ್ತೆ ಆದರೆ ಪುರಸಭೆ ಅಧಿಕಾರಿಗಳ ಬಳಿಯೇ ಸ್ವಚ್ಛತೆಯ ಸಂಸ್ಕಾರ ಇಲ್ಲ. ಕಸ ವಿಲೇವಾರಿ ಎಂದು ಅಲ್ಲಿನ ನಿವಾಸಿಗಳು ದೂರಿದರು. ದೊಡ್ಡ ಪ್ರಮಾಣದಲ್ಲಿ ಶೇಖರಣೆಯಾಗಿರುವ ಕಸವನ್ನು ಮಂಗಳವಾರ ಬಂದ ಕಸವಿಲೇವಾರಿ ವಾಹನಕ್ಕೆ ಹಾಕುವ ವಿಡಿಯೋ, ಫೋಟೋ ತೆಗೆದು 'ಉದಯರಶ್ಮಿ'ಗೆ ನೀಡಿದ ಸಾರ್ವಜನಿಕರು ಮನೆಯಲ್ಲಿ ಕಸ ಶೇಖರಣೆಯಾಗಿ ಸಾಂಕ್ರಾಮಿಕ ರೋಗಗಳಿಗೆ ತುತ್ತಾದರೆ ಅದಕ್ಕೆ ಪುರಸಭೆಯೇ ನೇರ ಹೊಣೆ ಹೊರಬೇಕಾಗುತ್ತದೆ. ಇಲ್ಲಿ ಆಗುತ್ತಿರುವ ತೊಂದರೆಯನ್ನು ಜಿಲ್ಲಾಧಿಕಾರಿಗಳು ಕೂಡಲೇ ಸರಿಪಡಿಸಬೇಕು. ಇಲ್ದಿದ್ರೆ ಉಗ್ರವಾಗಿ ಪ್ರತಿಭಟಿಸುವದಾಗಿ ಎಚ್ಚರಿಸಿದರು.

ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಅತ್ಯುತ್ತಮ ಸಂಘ ಪ್ರಶಸ್ತಿ ಪ್ರದಾನ

# ವಿಜಯಪುರ ಕಾನಿಪ ಸಂಘ ಇತರ ಸಂಘಗಳಿಗೆ ಮಾರ್ಗದರ್ಶಿ :ತಗಡೂರ

**ಉದಯರಶ್ಮಿ ನ್ಯೂಸ್**



ವಿಜಯಪುರ: ಕೆಯುಡಬ್ಲೂಜೆ ಉತ್ತಮ ಜಿಲ್ಲಾ ಸಂಘ ಪ್ರಶಸ್ತಿಗೆ ಪುರಸ್ಕೃತವಾದ ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ದಾವಣಗೆರೆಯಲ್ಲಿ ನಡೆದ 38ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿಗೆ ಪುರಸ್ಕೃತವಾದ ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪರವಾಗಿ ಜಿಲ್ಲಾಧ್ಯಕ್ಷ ಸಂಗಮೇಶ ಚೂರಿ ಸಂಘದ ಸದಸ್ಯರ ಹರ್ಷೋದ್ಗಾರಗಳ ಮಧ್ಯೆ ಗಣ್ಯರಿಂದ ಪ್ರಶಸ್ತಿ ಸ್ವೀಕರಿಸಿದರು.

ಶಶಿಕಾಂತ ಪ್ರಶಸ್ತಿ ಸ್ವೀಕಾರ: ಇದೇ ವೇಳೆ ಅತ್ಯುತ್ತಮ ತನಿಖಾ ವರದಿಗೆ ಟಿ.ಕೆ. ಮಲಗೊಂಡ ರಾಜ್ಯ ಪ್ರಶಸ್ತಿಯನ್ನು ಖಾಸಗಿ ವಾಹಿನಿಯ ವರದಿಗಾರ ಶಶಿಕಾಂತ ಮೆಂಡೆಗಾರ ಸ್ವೀಕರಿಸಿದರು.

ಬಳಿಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಅತ್ಯುತ್ತಮ ಸಂಘ ಪ್ರಶಸ್ತಿ ಲಭಿಸಿರುವುದು ಮತ್ತು ನಾನೇ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಸಂತಸವನ್ನುಂಟು ಮಾಡಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಚಟುವಟಿಕೆಗಳು ಇತರ ಎಲ್ಲಾ ಸಂಘಗಳಿಗೂ ಮಾರ್ಗದರ್ಶಿಯಾಗಿವೆ ಎಂದು ಪ್ರಶಂಸಿದರು.

ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಜಿಲ್ಲಾ ಉಸ್ತುವಾರಿ ಪುಂಡಲೀಕ ಬಾಳೋಜಿ, ಪ್ರಧಾನ ಕಾರ್ಯದರ್ಶಿ ಮೋಹನ ಪಿ. ಕುಲಕರ್ಣಿ, ರಾಜ್ಯ ಸಮಿತಿ ಸದಸ್ಯ ಡಿ.ಬಿ. ವಡವಡಗಿ, ನಾಮನಿರ್ದೇಶನ ಸದಸ್ಯ ಕೆ.ಕೆ. ಕುಲಕರ್ಣಿ, ಸಂಘದ ಉಪಾಧ್ಯಕ್ಷರಾದ ಇಂದುಶೇಖರ ಮಣೂರ, ಪ್ರಕಾಶ ಬೆಣ್ಣೂರ, ಖಜಾಂಚಿ ರಾಹುಲ್ ಆಪ್ಟೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಶಿಕಾಂತ ಮೆಂಡೇಗಾರ, ಸಮೀರ್ ಇನಾಂದಾರ, ಮಾಜಿ ಅಧ್ಯಕ್ಷ ಸಚೇಂದ್ರ ಲಂಬು, ಪತ್ರಕರ್ತರಾದ ದೇವೇಂದ್ರ ಹೆಳವರ, ಟಿ.ಕೆ. ಮಲಗೊಂಡ, ಮಾಧವರಾವ್ ಕುಲಕರ್ಣಿ, ಸೀತಾರಾಮ ಕುಲಕರ್ಣಿ, ಗೋಪಾಲ ಕಣಿಮನಿ, ರಶ್ಮಿ ಪಾಟೀಲ, ಶ್ರೀನಿವಾಸ ಸೂರಗೊಂಡ, ಬಿ.ಬಿ. ಪಾಟೀಲ, ವಿಠ್ಠಲ ಲಂಗೋಟಿ, ಸಂಜು ಕೋಳಿ, ಮುದ್ದೇಬಿಹಾಳ ತಾಲೂಕು ಅಧ್ಯಕ್ಷ ಮುತ್ತು ವಡವಡಗಿ, ಪ್ರಧಾನ ಕಾರ್ಯದರ್ಶಿ ರವಿ ನಂದೆಪ್ಪಗೋಳ, ನಿಡಗುಂದಿ ತಾಲೂಕು ಅಧ್ಯಕ್ಷ ರಾಜು ತೊರಗಲ್ಲಮಠ, ಚಡಚಣ ಪ್ರಧಾನ ಕಾರ್ಯದರ್ಶಿ ಡೋಣಜಮಠ ಸೇರಿದಂತೆ ಸಂಘದ ಸರ್ವ ಸದಸ್ಯರಿದ್ದರು.



ಶ್ರೀ ಎಸ್.ಎಂ.ಮಣೂರ, ಎಸ್.ಬಿ.ಮಾಡೆಲ್ ಪಬ್ಲಿಕ್ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ

# ಮಕ್ಕಳನ್ನು ಮೋಬೈಲನಿಂದ ದೂರವಿಡಿ :ಹ.ಮ.ಪೂಜಾರ

**ಉದಯರಶ್ಮಿ ನ್ಯೂಸ್**



ಸಿಂದಗಿ: ಪಾಲಕರು ಮಕ್ಕಳನ್ನು ಮೋಬೈಲನಿಂದ ದೂರವಿಟ್ಟು, ಅವರಲ್ಲಿ ಉನ್ನತ ಜೀವನ ಮೌಲ್ಯಗಳನ್ನು ತುಂಬಿ ಭವಿಷ್ಯದ ಸತ್ಪ್ರಜೆಯಾಗಿಸಬೇಕು ಎಂದು ಮಕ್ಕಳ ಹಿರಿಯ ಸಾಹಿತಿ ಹ.ಮ.ಪೂಜಾರ ಪಾಲಕರಿಗೆ ಕರೆ ನೀಡಿದರು.

ಪಟ್ಟಣದ ಶ್ರೀ ಎಸ್.ಎಂ.ಮಣೂರ, ಎಸ್.ಬಿ.ಮಾಡೆಲ್ ಪಬ್ಲಿಕ್ ಶಾಲೆಯಲ್ಲಿ ಈಚೆಗೆ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಎನ್.ಆರ್. ಮಣೂರ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯೇ ನಮ್ಮ ಶಿಕ್ಷಣ ಸಂಸ್ಥೆಯ ಪ್ರಮುಖ ದ್ಯೇಯವಾಗಿದ್ದು, ಈ ದಿಸೆಯಲ್ಲಿ ಶಾಲಾ ಶಿಕ್ಷಕರ ಬಳಗ ನಿರಂತರ ಮಾರ್ಗದರ್ಶನ ಮಾಡುತ್ತಿದೆ. ಪಾಲಕರೂ ಸಹ ಮಕ್ಕಳ ಚಟುವಟಿಕೆಗಳನ್ನು ಸದಾ ಗಮನಿಸುತ್ತಿರಬೇಕು ಎಂದು ಸಲಹೆ ನೀಡಿದರು.

ಶಾಲಾ ಆಡಳಿತಾಧಿಕಾರಿ ಪ್ರೊ. ಎಸ್.ಎನ್. ಹೊಳಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಾಲಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಶಾಲಾ ಮುಖ್ಯ ಗುರುಮಾತೆ ಶ್ರೀಮತಿ ಪಿ.ಎಸ್. ಹೊಳಿ ವರದಿ ವಾಚಿಸಿದರು.

ಅಶೋಕ ಕಮರಡ್ಡಿ ಸ್ವಾಗತಿಸಿದರು. ಶ್ರೀದೇವಿ ಚೌಕಿಮಠ ವಂದಿಸಿದರು.

ಸಂಸ್ಥೆಯ ನಿರ್ದೇಶಕ ಮಂಡಳಿ ಸದಸ್ಯರು, ಶಿಕ್ಷಕಿಯರು ಸೇರಿದಂತೆ ಪಾಲಕರು, ಮಕ್ಕಳು ಇದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳು ಪ್ರದರ್ಶಿಸಿದ ನೃತ್ಯ ಪ್ರದರ್ಶನಗಳು ನೋಡುಗರ ಗಮನ ಸೆಳೆದವು.

# ಫೆ.12 ರಿಂದ ಕಡಕೋಳ ಮಡಿವಾಳೇಶ್ವರರ ಪ್ರವಚನ



**ಉದಯರಶ್ಮಿ ನ್ಯೂಸ್**

ಸಿಂದಗಿ: ತಾಲೂಕಿನ ಹಿಕ್ಕಣಗುತ್ತಿ ಗ್ರಾಮದಲ್ಲಿ ಫೆ.12 ರಿಂದ ಮಾ.8 ರವರೆಗೆ ಕಡಕೋಳ ಶ್ರೀ ಮಡಿವಾಳೇಶ್ವರರ ಜೀವನ ಚರಿತ್ರೆ ಪ್ರವಚನವು ಸಾಯಂಕಾಲ 7:30ಗಂಟೆಯಿಂದ ಶ್ರೀಮಠದ ಶ್ರೀ ಪ್ರಭಲಿಂಗ ಶರಣರ ಅಮೃತ ವಾಣಿಯಿಂದ ಜರಗುವುದು. ಕಾರಣ ಹಿಕ್ಕಣಗುತ್ತಿ-ತಡವಲಗಾ ಹಾಗೂ ಗ್ರಾಮದ ಸುತ್ತ ಮುತ್ತಲಿನ ಸದ್ಭಕ್ತರು ಭಾಗವಹಿಸಬೇಕು. ಸಂಗೀತ ಸೇವೆಯನ್ನು ಬೋರಗಿಯ ವಿರೇಶ ವಿಶ್ವಕರ್ಮ, ಚಿಟಗುಪ್ಪಾದ ಪ್ರವೀಣ ವಿಶ್ವಕರ್ಮ, ನಂದಿ ಸೇವಯನ್ನು ಅಣ್ಣಾರಾಯಗೌಡ ಬಿರಾದಾರ ನಡೆಸಿಕೊಡುವರು ಎಂದು ಪಂಚಮಸಾಲಿ ಸಮಾಜ ತಾಲೂಕಾಧ್ಯಕ್ಷ ಎಂ.ಎಂ.ಹಂಗರಗಿ ಹೇಳಿದರು.

ಈ ವೇಳೆ ಕಾನಿಪ ಅಧ್ಯಕ್ಷ ಆನಂದ ಶಾಬಾದಿ, ಗ್ರಾಂಪ ಅಧ್ಯಕ್ಷ ಎನ್.ಎಸ್ ಬಿರಾದಾರ, ಉಪಾಧ್ಯಕ್ಷ ಅಮೃತ ಮರಬದ, ಚಂದ್ರಕಾಂತ ಸಣ್ಣಮನಿ, ಸಿದ್ದರಾಮ ಬಾದನ, ಶಿವಲಿಂಗಪ್ಪ ಸತಾಲಗಾವ್, ನಾಗಣ್ಣ ಬಿರಾದಾರ, ಎಚ್.ಎಂ.ಪಾಟೀಲ್ ಯಡಗಿ ಸೇರಿದಂತೆ ಗ್ರಾಮಸ್ಥರು ಇದ್ದರು.

# ವಿಜಯಪುರ ಜಿಲ್ಲೆ ಮಕ್ಕಳ ಸಾಹಿತ್ಯದ ಖಣಜ :ಡಾ.ಪಡಶೆಟ್ಟಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ತಾಯ್ತನವುಳ್ಳವರಿಂದ ಮಾತ್ರ ಮಕ್ಕಳ ಸಾಹಿತ್ಯ ರಚನೆ ಸಾಧ್ಯ. ವಿಜಯಪುರ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯ ಗಟ್ಟಿಯಾಗಿದೆ. ಜಿಲ್ಲೆ ಮಕ್ಕಳ ಸಾಹಿತ್ಯದ ಖಣಜವಾಗಿದೆ ಎಂದು ಜಾನಪದ ವಿದ್ವಾಂಸ ಡಾ.ಎಂ.ಎಂ. ಪಡಶೆಟ್ಟಿ ಅಭಿಪ್ರಾಯಪಟ್ಟರು.

ಪಟ್ಟಣದ ಸಾರಂಗಮಠದ ಆವರಣದಲ್ಲಿ ವಿದ್ಯಾಚೇತನ ಪ್ರಕಾಶನ ಹಮ್ಮಿಕೊಂಡಿದ್ದ ಐದು ಕೃತಿಗಳ ಲೋಕಾರ್ಪಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಪ.ಗು.ಸಿದ್ದಾಪೂರ ಗಟ್ಟಿಯಾಗಿ ನೆಲೆ ನಿಂತಿದ್ದಾರೆ. ಮಕ್ಕಳ ಸಾಹಿತ್ಯವನ್ನು ಪಠ್ಯಪುಸ್ತಕಗಳಲ್ಲಿ ಸೇರ್ಪಡೆಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕುವ ಜನಾಂದೋಲನ ಪ್ರಾರಂಭಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಕ್ಕಳ ಸಾಹಿತಿ ಪ.ಗು. ಸಿದ್ದಾಪೂರ ಮಾತನಾಡಿ, ಸರ್ಕಾರಗಳು ಮಾಡದ ಸಾಹಿತ್ಯ, ಶಿಕ್ಷಣ, ಸಾಂಸ್ಕೃತಿಕ ಕಾರ್ಯಗಳನ್ನು ಮಠಗಳು ಮಾಡುತ್ತಿವೆ. ಬಂಥ-ನಾಳ ಶ್ರೀ ವಿಜಯಪುರದಲ್ಲಿ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆ ಸ್ಥಾಪಿಸಿದರೆ, ಬಾಗಲಕೋಟೆಯಲ್ಲಿ ಬೀಳೂರ ಸ್ವಾಮೀಜಿ ಬಸವೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪನೆ ಮಾಡುವ ಮೂಲಕ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ ಎಂದರು.



ಇದೇ ಸಂದರ್ಭದಲ್ಲಿ ಮಕ್ಕಳ ಸಾಹಿತಿ ಹ.ಮ. ಪೂಜಾರ ರಚಿತ ಚತುರ ಚಿಣ್ಣರು ಕಥಾ ಸಂಕಲನ, ಕೆಮ್ಮಿನ ಔಷಧಿ ಉಚಿತ ನಗೆ ಹನಿ ಪುಸ್ತಕ, ಮುಳವಾಡದ ಮಕ್ಕಳ ಸಾಹಿತಿ ಪ.ಗು. ಸಿದ್ದಾಪೂರ ರಚಿತ ಅಕ್ಕರೆ ಅಜ್ಜ ನಾವು ಮತ್ತು ಗಾಂಧಿ ತಾತ ಕವನ ಸಂಕಲನ, ಶಿಕ್ಷಕ ಸಾಹಿತಿ ಎಸ್.ಎಸ್.ಸಾತಿಹಾಳ ರಚಿತ ಏನು ಚಂದವೋ ಮಕ್ಕಳ ಕವನ ಸಂಕಲನವನ್ನು ಸಾರಂಗಮಠ-ಗಚ್ಚಿನಮಠದ ಶ್ರೀ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಲೋಕಾರ್ಪಣೆ ಮಾಡಿದರು.

ಸ್ಥಳಿಯ ಎಚ್.ಜಿ. ಪಿಯು ಕಾಲೇಜಿನ ಪ್ರಾಚಾರ್ಯ ಎ.ಆರ್. ಹೆಗ್ಗನದೊಡ್ಡಿ ಅವರು, ಮಕ್ಕಳ ಸಾಹಿತಿ ಹ.ಮ. ಪೂಜಾರ ರಚಿತ ಚತುರ ಚಿಣ್ಣರು ಕಥಾ ಸಂಕಲನ, ಕೆಮ್ಮಿನ ಔಷಧಿ ಉಚಿತ ನಗೆ ಹನಿ, ಪರಿಚಯಿಸಿದರು. ಬಬಲೇಶ್ವರದ ಶ್ರೀ ಶಾಂತವೀರ ಪದವಿಪೂರ್ವ ಮಹಾವಿದ್ಯಾಲಯದ ರಾಜ್ಯಪ್ರಶಸ್ತಿ ಪುರಸ್ಕೃತ ಉಪನ್ಯಾಸಕ ಮಹಾದೇವ ರೆಬಿನಾಳ ಮುಳವಾಡದ ಮಕ್ಕಳ ಸಾಹಿತಿ ಪ.ಗು. ಸಿದ್ದಾಪೂರ ರಚಿತ ಅಕ್ಕರೆ ಅಜ್ಜ ನಾವು ಮತ್ತು ಗಾಂಧಿ ತಾತ ಕವನ ಸಂಕಲನಗಳನ್ನು ಮತ್ತು ಶಿಕ್ಷಕ ಸಾಹಿತಿ ಎಸ್.ಎಸ್. ಸಾತಿಹಾಳ ರಚಿತ ಏನು ಚಂದವೋ ಮಕ್ಕಳ ಕವನ ಸಂಕಲನವನ್ನು ಪರಿಚಯ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ವಿದ್ಯಾಚೇತನ ಪ್ರಕಾಶನದ ಹ.ಮ. ಪೂಜಾರ ಮಾತನಾಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ವಿಜಯಪುರ ವೈದ್ಯ ಎಸ್.ಬಿ. ಮಿರಜಕರ, ರೇಖಾ, ಚುಕ್ಕಿ ಚಿತ್ರಕಲೆಯಲ್ಲಿ ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಚಿತ್ರಕಲಾವಿದ ರಮೇಶ ಸಾಸನೂರ, ಮಕ್ಕಳ ಸಾಹಿತಿ ರಾ.ಶಿ. ವಾಡೇದ ಅವರನ್ನು ಶ್ರೀಗಳು ಗೌರವಿಸಿದರು.

ಮಕ್ಕಳ ಸಾಹಿತಿ ಎಸ್.ಎಸ್. ಸಾತಿಹಾಳ ಸ್ವಾಗತಿಸಿದರು. ಎಸ್. ಕೆ. ಗುಗ್ಗರಿ ನಿರೂಪಿಸಿದರು. ರಾಚು ಕೊಪ್ಪಾ ವಂದಿಸಿದರು.

# ಮಕ್ಕಳ ಮನಸೆಳೆವ ಸರ್ಕಾರಿ ಉರ್ದು ಶಾಲೆ :ತಹಶೀಲ್ದಾರ ಸಿಂದಗಿ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಮಕ್ಕಳ ಆಸಕ್ತಿಕರ ಕಲಿಕೆಯಲ್ಲಿ ಶಾಲಾ ಆವರಣ ಹಾಗೂ ವ್ಯವಸ್ಥೆ ಬಹುಮುಖ್ಯ ಪಾತ್ರ ವಹಿಸುತ್ತದೆ ಎಂದು ತಹಶೀಲ್ದಾರ ಪ್ರಕಾಶ ಸಿಂದಗಿ ಹೇಳಿದರು.

ಪಟ್ಟಣದ ಸರ್ಕಾರಿ ಉರ್ದು ಶಾಲೆಗೆ ಇತ್ತೀಚಿಗೆ ಭೇಟಿ ನೀಡಿ ಶಾಲೆ ಹಾಗೂ ಕೋಣೆಗಳು ರೈಲು ಮಾದರಿಯಲ್ಲಿ ಬಣ್ಣ ಬಳಿದುಕೊಂಡು ಅಲಂಕೃತಗೊಂಡ ಬಗ್ಗೆ ತಮ್ಮ ಹರ್ಷ ವ್ಯಕ್ತಪಡಿಸಿ ಶಾಲಾ ಸಿಬ್ಬಂದಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಸರ್ಕಾರಿ ಶಾಲೆಯಲ್ಲಿ ಮೂಲಸೌಕರ್ಯಗಳ ಕೊರತೆ ಇವೆ ಎಂದು ಬಹುತೇಕ ಶಾಲೆಗಳ ಕುರಿತು ದೂರು ಬರುತ್ತಿರುವ ಈ ಸಂದರ್ಭದಲ್ಲಿ ಇರುವ ಸೌಲಭ್ಯಗಳನ್ನು ಬಳಕೆ ಮಾಡಿಕೊಂಡು ವ್ಯವಸ್ಥಿತವಾಗಿ ಶಾಲೆಯನ್ನು ಸುಂದರವನ್ನಾಗಿಸಿ, ಮಕ್ಕಳ ಮನಸೆಳೆಯವಲ್ಲಿ ಮುಖ್ಯಗುರು ಹಾಗೂ ಸಿಬ್ಬಂದಿ ಶ್ರಮಿಸಿದ್ದಾರೆ. ಅವರ ಶ್ರಮ ಹಾಗೂ ವಿಶೇಷ ಪ್ರಯತ್ನವನ್ನು ಪಾಲಕರು ಅರಿತುಕೊಂಡು ಸಹಕಾರ ನೀಡುವಂತೆ ಸಲಹೆ ನೀಡಿದರು. ನಂತರ ಶಾಲಾ ಸಿಬ್ಬಂದಿಯಿಂದ ಸನ್ಮಾನ ಸ್ವೀಕರಿಸಿದರು.

ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷ ಎ.ಎಮ್.ವಾಲೀಕಾರ, ಉಪತಹಶೀಲ್ದಾರ ಸುರೇಶ ಮ್ಯಾಗೇರಿ, ಮುಖ್ಯಗುರು ಆರ್.ಎಮ್. ಹಳ್ಳಿ, ಸಿಬ್ಬಂದಿ ಎಮ್.ಎ.ಹೆಬ್ಬಾಳ, ಎಂ.ಜಿ.ಯಂಕಂಚಿ, ಬಂದೇನವಾಜ್ ಸೇರಿದಂತೆ ಎಸ್‌ಡಿಎಮ್‌ಸಿ ಅಧ್ಯಕ್ಷ ಮುಸ್ತಫಾ ಮುಲ್ಲಾ, ಅಮೀರ್ ಮಕಾಂದಾರ್, ಯಾಕೂಬ್ ಹೊನ್ನುಟಗಿ, ನಬಿಲಾಲ್ ಮಣೂರ, ಮಕ್ಕಳು ಹಾಗೂ ಸದಸ್ಯರು ಇದ್ದರು.

# ಅರವಿಂದೋ ಸಮಿತಿಯಿಂದ ವಾರ್ಷಿಕೋತ್ಸವ

**ಉದಯರಶ್ಮಿ ನ್ಯೂಸ್**



ಇಂಡಿ: ಶಿಕ್ಷಣ ಕುರಿತು ಮಹರ್ಷಿ ಅರವಿಂದರು ಮಂಡಿಸಿದ ವಿಚಾರಗಳು ಮಾನವ ಕಲ್ಯಾಣ, ಮಾನವ ವಿಕಾಸ ಪಥಕ್ಕೆ ಮಾರ್ಗದರ್ಶಿ. ಶಿಕ್ಷಣ ಕುರಿತು ಮಂಡಿಸಿದ ವಿಚಾರಗಳು ವರ್ತಮಾನದ ಗ್ರಹಿಕೆಯಿಂದಲೂ ಪರಿಪುಷ್ಟವಾದುದು ಎಂದು ನಿವೃತ್ತ ಪ್ರಾಚಾರ್ಯ ಎ.ಎಸ್. ಗಾಣಿಗೇರ ಹೇಳಿದರು.

ತಾಲೂಕಿನ ಸಾಲೋಟಗಿ ಗ್ರಾಮದ ರಾಮಲಿಂಗೇಶ್ವರ ಪ್ರಾಂಗಣದಲ್ಲಿ ಶ್ರೀ ಅರವಿಂದೋ ಸಮಿತಿಯಿಂದ ವಾರ್ಷಿಕೋತ್ಸವ 2023 ನಡೆದ ಸಮಾರಂಭದಲ್ಲಿ ಮಾತನಾಡಿದರು.

ಮಹರ್ಷಿ ಅರವಿಂದರ ಚಿಂತನೆಗಳ ಬೆಳಕಿನಲ್ಲಿ ಭಾರತೀಯ ಶಿಕ್ಷಣವನ್ನು ಕಟ್ಟಬೇಕಾಗಿದೆ ಎಂದರು.

ಮಹಾನಂದಾ ಬಿರಾದಾರ ಮೀರಾ ಮಾತೆಯ ಕುರಿತು ಮಾತನಾಡಿ, ನಾವು ಮಾತೆಯವರ ಮಕ್ಕಳು, ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿರುವ ನಮಗೆ ಯಾವತ್ತೂ ನಮ್ಮ ಮಾತೆ ಮಕ್ಕಳ ಕೈ ಬಿಡುವದಿಲ್ಲ ಎಂದರು.

ಸಂಶೋಧಕ ಡಿ.ಎನ್.ಅಕ್ಕಿಯವರು ಮಾತನಾಡಿ, ರಾಮಲಿಂಗೇಶ್ವರ ದೇವಸ್ಥಾನದ ಪುರಾತನತೆ ಮತ್ತು ಸಾಲೋಟಗಿಯಲ್ಲಿ ರಾಷ್ಟ್ರಕೂಟ-ರ ಮೂರನೆ ಕೃಷ್ಣನ ಕಾಲಕ್ಕೆ ಇದ್ದ ವಿಶ್ವವಿದ್ಯಾಲಯದ ಕು-ರಿತು ಸಂಶೋಧನಾತ್ಮಕವಾಗಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಸಾಹಿತಿ ಗೀತಯೋಗಿ ಮಾತನಾಡಿ ಸಾಲೋಟಗಿಯ ಶ್ರೀ ಅರವಿಂದರ ಸಮಿತಿ ನಡೆದು ಬಂದ ದಾರಿ ಮತ್ತು ಮಾತಾರವಿಂದರ ಯೋಗಸೂತ್ರಗಳನ್ನು ತಿಳಿದುಕೊಳ್ಳಲು ಮಧುರಚೆನ್ನರ ನನ್ನ ನಲ್ಲ ನೆರವಾಗುತ್ತದೆ ಎಂದರು.

ಸಮಿತಿಯ ಅಧ್ಯಕ್ಷ ದುಂಡಪ್ಪ ಹ್ಯಾಳದ, ಸತೀಶ ವಾಲಿ,ವಿನೋದ ಗಾಣಿಗೇರ ಮಾತನಾಡಿದರು.

ಸುಭಾಸಚಂದ್ರ ಗದ್ಯಾಳ, ಅಶೋಕ ಚನಗೊಂಡ, ಸೋಮನಾಥ ಶಿವೂರ, ಮಲ್ಲಪ್ಪ ಮಂಗೋಡ, ಗುರುಶಾಂತ ಪ್ರಧಾನಿ, ಶಿವಶಂಕರ ಇಂಗಳೆ, ಗಂಗಾಧರ ಸೋಮಜ್ಯಾಳ, ಶಿವಯೋಗಪ್ಪ ದೊಡ್ಡಿ ಮತ್ತಿತ-ರಿದ್ದರು.

# ಆರೋಗ್ಯಕರ ಸಮಾಜ ಕಟ್ಟುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಪಾತ್ರ ಮುಖ್ಯ

**ಉದಯರಶ್ಮಿ ನ್ಯೂಸ್**



ಇಂಡಿ: ಸುಂದರ ಬದುಕು ಹಾಗೂ ಆರೋಗ್ಯಕರ ಸಮಾಜ ಕಟ್ಟುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಶಿಸ್ತು ಮತ್ತು ಕೌಶಲ್ಯದ ಪಾತ್ರ ಮಹತ್ವದ್ದಾಗಿದೆ ಎಂದು ಜಿಲ್ಲಾ ಪ್ರಭಾರಿ ದೈಹಿಕ ಶಿಕ್ಷಣ ಪರಿವೀಕ್ಷಕ ಎ.ಎಸ್. ಲಾಳಸೇರಿ ಹೇಳಿದರು.

ಅವರು ಪಟ್ಟಣದ ಗುರುಭವನದಲ್ಲಿ ಭಾರತ ಸ್ಕೌಟ್ಸ್, ಗೈಡ್ಸ್ ಸ್ಥಳೀಯ ಸಂಸ್ಥೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಹಮ್ಮಿಕೊಂಡ ಸ್ಕೌಟ್ಸ್ ಮತ್ತು ಕಬ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಫ್ಲಾಕ್ ಲೀಡರ್ ರವರ ತಾಲೂಕಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ನಾಲ್ಕು ಗೋಡೆಗಳ ನಡುವೆ ಓದು-ಬರಹ ಕಲಿಯುವುದರ ಜತೆಗೆ ನಿಸರ್ಗದ ಮಡಿಲಲ್ಲಿ ಒಂದಾಗಿ ಬೆರೆತು, ಸಮನ್ವಯದಿಂದ ಬಾಳಲು ಕಲಿಯುವಂತೆ ಉತ್ತೇಜಿಸುವ ಸ್ಕೌಟ್ಸ್ ಚಟುವಟಿಕೆಗಳು ತಾಲೂಕಿನಲ್ಲಿ ಹೆಚ್ಚಾಗಿ ನಡೆಯಬೇಕಿದೆ ಎಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಯದರ್ಶಿ ಪಿ.ಎಸ್‌ಕುಂಬಾರ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಸೇರ್ಪಡೆಯಿಂದ ವಿದ್ಯಾರ್ಥಿಯ ವ್ಯಕ್ತಿತ್ವ ವಿಕಸನದ ಜತೆಗೆ ಕಲಿಕೆಯಲ್ಲೂ ಪ್ರಗತಿ ಸಾಧಿಸಲು ಸಾಧ್ಯ. ಹಾಗಾಗಿ ಎಲ್ಲ ಶಾಲಾ ಮಕ್ಕಳು ಸ್ಕೌಟ್ಸ್ ಮತ್ತು ಗೈಡ್ಸ್ ಸೇರ್ಪಡೆಗೊಳ್ಳುವಂತೆ ಕ್ರಮವಹಿಸಬೇಕು ಎಂದು ತಿಳಿಸಿದರು.

ಸ್ಕೌಟ್ಸ್ ಮಾಸ್ಟರ್ ಸಂತೋಷ ಬಂಡೆ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸಿಂದ ಮಕ್ಕಳಲ್ಲಿ ಪರಿಸರ ಪ್ರಜ್ಞೆ, ಸಂಸ್ಕೃತಿಯ ಅರಿವು ಉಂಟಾಗುತ್ತದೆ. ಪರಿಸರ ಉಳಿಸಿ-ಬೆಳೆಸುವ ಮನೋಭಾವವನ್ನು ಮಕ್ಕಳಲ್ಲಿ ಹೆಚ್ಚಿಸಿ, ರಾಷ್ಟ್ರ ಪ್ರೇಮ, ದೇಶಭಕ್ತಿಯ ಪರಿಕಲ್ಪನೆಯನ್ನು ಗಟ್ಟಿಗೊಳಿಸಬೇಕು ಎಂದು ಹೇಳಿದರು.

ತಾಲೂಕ ಕಾರ್ಯದರ್ಶಿ ಶಹಾಜಿ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ಮುಂದಿನ ಪೀಳಿಗೆಗೆ ಉತ್ತಮ ನಾಗ-ರಿಕರನ್ನು ನಿರ್ಮಾಣ ಮಾಡುವ ಕೆಲಸ ಸ್ಕೌಟ್ಸ್ ಮತ್ತು ಗೈಡ್ಸಿಂದಾಗಬೇಕು. ಮನುಷ್ಯನಿಗೆ ಸಂತೋಷ ಮತ್ತು ಆನಂದ ಸ್ಕೌಟ್ಸ್ ಮತ್ತು ಗೈಡ್ಸಿಂದ ಸಿಗಲು ಸಾಧ್ಯ ಎಂದರು.

ಇಂಡಿ ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ವ್ಹಿ. ಹರಳಯ್ಯ, ಖಜಾಂಚಿ ಬಸವರಾಜ ಗೊರನಾಳ, ಸ್ಕೌಟ್ಸ್ ಮಾಸ್ಟರ್‌ಗಳಾದ ವೈ.ಜಿ. ಬಿರಾದಾರ, ದತ್ತಾತ್ರೆಯ ಕೋಳಾರಿ, ಸಂಗಮೇಶ ಬಂಡೆ, ಎಸ್.ಎಸ್. ಧೂಳಖೇಡ, ಸಿ.ಎಸ್. ಮೇತ್ರಿ ಹಾಗೂ ಗೈಡ್ ಕ್ಯಾಪ್ಟನ್‌ಗಳಾದ ನಾಗೇಶ್ವರಿ, ಸುಮಂಗಲಾ ಸಿ, ಗೌರಿ, ಮಲ್ಲಮ್ಮ ಗಿರಣಿವಡ್ಡರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗೈಡ್ ಕ್ಯಾಪ್ಟನ್ ಸವಿತಾ ಹಾದಿಮನಿ ವರದಿ ವಾಚಿಸಿದರು.

# ಬಿ.ಎಡ್ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ



**ಉದಯರಶ್ಮಿ ನ್ಯೂಸ್**

ಚಡಚಣ: ನಗರದ ಶ್ರೀ ಸಂಗಮೇಶ್ವರ ಶಿಕ್ಷಣ ಸಂಸ್ಥೆಯ ಶ್ರೀ ಗುರು ಮಲ್ಲಿಕಾರ್ಜುನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಬಿ.ಎಡ್ ಪ್ರಶಿಕ್ಷಣಾರ್ಥಿಗಳಿಗೆ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ಸ್ವಾಗತ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಪ್ರೊ. ಎಸ್. ಎಸ್ ಚವ್ಹಾಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾವಿ ಶಿಕ್ಷಕರಾದ ನೀವು ನಿರಂತರ ಕಲಿಕೆ, ಗುಣಮಟ್ಟದ ಶಿಕ್ಷಣವನ್ನು ಪಡೆದುಕೊಂಡು ಮುಂದಿನ ಶೈಕ್ಷಣಿಕ ಚಟುವಟಿ-ಕೆಗಳಲ್ಲಿ ಉತ್ತಮ ಸಮಾಜದ, ಉತ್ತಮ ಭವಿಷ್ಯ ನಿರ್ಮಾಣ ಮಾಡುವಂತಹ ಶಿಕ್ಷಕರಾಗಿ ಹೊರಹೊಮ್ಮಿ ಎಂದು ಶುಭ ಹಾರೈಸಿದರು.

ಈ ವೇಳೆಯಲ್ಲಿ ಮಹಾವಿದ್ಯಾಲಯ ಬೋಧಕ,ಬೋಧಕೇತರ ಹಾಗೂ ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತ-ರಿದ್ದರು.

ಈ ವೇಳೆ ಸೃಷ್ಟಿ ಭಟ್ಟಿ ಕಾರ್ಯಕ್ರಮ ನಿರೂಪಿಸಿದರು, ದಾನಮ್ಮ ಚಕೋತೆ ಸ್ವಾಗತಿಸಿದರು, ರೂಪಾ ಅಗಸರ ಕಾಲೇಜಿನ ನಿಯಮಗಳನ್ನು ತಿಳಿಸಿದರು, ಅರುಣ್ ತೇಲಿ ವಂದಿಸಿದರು.

# ಫೆ.7ರಂದು ರಮಾಬಾಯಿ ಅಂಬೇಡ್ಕರ್ ಜನ್ಮದಿನಾಚರಣೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ತ್ಯಾಗಮೂರ್ತಿ ರಮಾಬಾಯಿ ಅಂಬೇಡ್ಕರ್ ಅವರ 126ನೇ ಜನ್ಮದಿನಾಚರಣೆ ಸಮಾರಂಭವನ್ನು ನಗರದ ಜಲನಗರದಲ್ಲಿರುವ ಸಾರಿಪುತ್ರ-ಬೋಧಿಧಮ್ಮ ಬುದ್ಧವಿಹಾರದಲ್ಲಿ ಬುಧವಾರ ದಿ.7 ರಂದು ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ದಿವ್ಯಸಾನಿಧ್ಯವನ್ನು ಕಲಬುರಗಿ ಜೇತವನ ಬುದ್ಧವಿಹಾರದ ಪೂಜ್ಯ ಬಿಕ್ಕುಣಿ ಡಾ.ಸುಮನಾ ಅವರು ವಹಿಸಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ.ಕೆ. ತುಳಸಿಮಾಲಾ ನೆರವೇ-ರಿಸಲಿದ್ದಾರೆ.

ಮಾತೆ ರಮಾಬಾಯಿ ಅಂಬೇಡ್ಕರ್ ಅವರ ಜೀವನ ಚರಿತ್ರೆಯ ಕುರಿತು ತಾಳಿಕೋಟೆಯ ಎಸ್. ಕೆ. ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸುಜಾತಾ ಚಲವಾದಿ ಅವರು ವಿಶೇಷ ಉಪನ್ಯಾಸವನ್ನು ನೀಡಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಬೌದ್ಧ ಉಪಾಸಕಿ ಸುಲೋಚನಾ ಚಲವಾದಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬೌದ್ಧ ಉಪಾಸಕಿ ಆಶಾ ಯಡಹಳ್ಳಿ ಹಾಗೂ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಬೌದ್ಧ ತತ್ವ ಜ್ಞಾನ ದಲ್ಲಿ ಎಂ.ಎ. ಪದವಿ ಪಡೆದ ಅನ್ನಪೂರ್ಣ ಬೆಳ್ಳೆನವರ ಭಾಗವಹಿಸಲಿದ್ದಾರೆ.

ಕಾರಣ ಜಿಲ್ಲೆಯ ಎಲ್ಲ ಬೌದ್ಧ ಮತ್ತು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಅನುಯಾಯಿಗಳು, ಪ್ರಗತಿಪರ ಚಿಂತಕರು, ಭಾರತೀಯ ಬೌದ್ಧ ಮಹಾಸಭಾ ಪದಾಧಿಕಾರಿಗಳು, ಬೌದ್ಧವಿಹಾರ ನಿರ್ಮಾಣ ಸಮಿತಿಯ ನಿರ್ದೇಶಕರು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಬಸವರಾಜ ಚಲವಾದಿ ಕೋರಿದ್ದಾರೆ.

# ಕರ್ನಾಟಕ ಸಂಭ್ರಮ ಜ್ಯೋತಿ ಯಾತ್ರೆ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಮೈಸೂರು ರಾಜ್ಯ ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಎಂಬ ಹೆಸರಿನಡಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥಯಾತ್ರೆಯು ತಾಲೂಕಿನ ಫೆ.7 ರಂದು ಸಂಜೆ 4 ಗಂಟೆಗೆ ಮುತ್ತಗಿ ಗ್ರಾಮದ ಮೂಲಕ ಬಸವನಾಡಿಗೆ ಜ್ಯೋತಿ ರಥಯಾತ್ರೆಯು ಪ್ರವೇಶ ಮಾಡಲಿದೆ. ರಥಯಾತ್ರೆಯನ್ನು ಅದ್ದೂರಿಯಾಗಿ ಬರಮಾಡಿಕೊಂಡ ನಂತರ ಫೆ. 8 ರಂದು ಬೆಳಗ್ಗೆ 10 ಬಸವನಬಾಗೇವಾಡಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜ್ಯೋತಿ ರಥಯಾತ್ರೆ ಸಂಚರಿಸಿ ಕರ್ನಾಟಕ ಇತಿಹಾಸ, ಕಲೆ, ಸಾಹಿತ್ಯ,ಸಂಸ್ಕೃತಿ ಹಾಗೂ ನಾಡು ನುಡಿಗೆ ಸಂಬಂಧಿಸಿದಂತೆ ಯುವಜನತೆಗೆ ಕನ್ನಡದ ಅರಿವು ಬಿಂಬಿಸಲಾಗುವುದು. ಇದೇ ದಿನ ತಾಲೂಕಿನ ಮಸಬಿನಾಳ, ಇಂಗಳೇಶ್ವರ, ದಿಂಡವಾರ, ಹೂವಿನಹಿಪ್ಪರಗಿಯಲ್ಲಿ ಸಂಚರಿಸಿ ಹೂವಿನಹಿಪ್ಪರಗಿಯಲ್ಲಿ ವಾಸ್ತವ್ಯ ಮಾಡಲಿದೆ. ಫೆ.9 ರಂದು ಹುಲಬೆಂಚಿ, ಬಳಗಾನೂರ ಗ್ರಾಮದ ಮೂಲಕ ತಾಳಿಕೋಟಿ ತಾಲೂಕಿಗೆ ಜ್ಯೋತಿ ರಥಯಾತ್ರೆಯನ್ನು ಬೀಳ್ಕೊಡಲಾಗುತ್ತದೆ. ಜ್ಯೋತಿ ರಥ ಯಾತ್ರೆಯ ಸ್ವಾಗತ, ಬೀಳ್ಕೊಡುಗೆ,ವಿವಿಧ ಗ್ರಾಮದಲ್ಲಿ ಸಂಚರಿಸುವ ಸಂದರ್ಭದಲ್ಲಿ ತಾಲೂಕಿನ ಜನಪ್ರತಿನಿಧಿಗಳು, ಕನ್ನಡಪರ ಒಕ್ಕೂಟಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾಹಿತಿಗಳು, ಚಿಂತಕರು, ಸರ್ವಜನಾಂಗದ ಕನ್ನಡಪ್ರೇಮಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಡಿಎಸ್ ಹಿರಿಯ ಉಪಾಧ್ಯಕ್ಷರಾಗಿ ಸೋಮನಗೌಡ (ಅಪ್ಪುಗೌಡ) ಆಯ್ಕೆ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಜೆಡಿಎಸ್ ಮುಖಂಡ ಸೋಮನಗೌಡ (ಅಪ್ಪುಗೌಡ) ಪಾಟೀಲ ಅವರನ್ನು ಜೆಡಿಎಸ್ ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿಯ ಹಿರಿಯ ಉಪಾಧ್ಯಕ್ಷರನ್ನಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ ಎಂದು ಅವರ ಆಪ್ತ ವೈಭವ ಪಾಟೀಲ ತಿಳಿಸಿದ್ದಾರೆ.

# ಕಿಡಿಗೇಡಿಯಿಂದ ಬಳ್ಳೊಳ್ಳಿ ಗ್ರಾಪಂ ಗೆ ಬೆಂಕಿ



**ಉದಯರಶ್ಮಿ ನ್ಯೂಸ್**

ಇಂಡಿ: ತಡರಾತ್ರಿ ಕಿಡಿಗೇಡಿಗಳು ಗ್ರಾಮ ಪಂಚಾಯತಿ ಮುಂಬಾಗಿಲಿಗೆ ಟೈರ್ ಇಟ್ಟು ಟೈರ್‌ಗೆ ಬೆಂಕಿ ಹಚ್ಚಿ ಪರಾರಿಯಾದ ಘಟನೆ ಇಂಡಿ ತಾಲೂಕಿನ ಬಳ್ಳೊಳ್ಳಿ ಗ್ರಾಮದಲ್ಲಿ ನಡೆದಿದೆ.

ಬೆಂಕಿ ಬಾಗಿಲಿಗೆ ಹತ್ತಿ ತದನಂತರ ಗ್ರಾ.ಪಂ ಒಳಗಿನ ಇಲೆಕ್ಟ್ರಿಕಲ್ ಸಾಮಾನಿಗೆ ತಗುಲಿದ್ದು ವಿವಿಧ ಇಲೆಕ್ಟ್ರಿಕಲ್ ಸಾಮಾನುಗಳು ಸುಟ್ಟು ಕರಕಲಾಗಿವೆ. ಗ್ರಾಮ ಪಂಚಾಯತಿ ಬಾಗಿಲು ಪೀಠೋಪಕರಣಗಳು,. ವೈರ್‌ಗಳು ಸುಟ್ಟು ಭಸ್ಮವಾಗಿವೆ.

ಈ ಝಳಕಿ ಪೊಲೀಸ್ ಠಾಣೆಯಲ್ಲಿ ಪಿಡಿಓ ಬಸವರಜ ಬಬಲಾದ ಪ್ರಕರಣ ದಾಖಲಿಸಿದ್ದಾರೆ.

## ವಿವಿಧ ಗ್ರಾಪಂಗಳಿಗೆ ಭೇಟಿ ನೀಡಿದ ನೋಡಲ್ ಅಧಿಕಾರಿ ವಿವೇಕ ಕುಮಾರ ಶರ್ಮಾ ಸೂಚನೆ

# ಕುಡಿವ ನೀರಿನ ಗುಣಮಟ್ಟ ಕಡ್ಡಾಯವಾಗಿ ಪರಿಶೀಲಿಸಿ

ವಿಜಯಪುರ: ಗಣಿ ಸಚಿವಾಲಯದ ನಿರ್ದೇಶಕರು ಹಾಗೂ ಕೇಂದ್ರ ಜಲ ಶಕ್ತಿ ತಂಡದ ಕೇಂದ್ರ ನೋಡಲ್ ಅಧಿಕಾರಿ ವಿವೇಕ ಕುಮಾರ ಶರ್ಮಾ ಮತ್ತು ವಿಜ್ಞಾನಿಗಳು, ಜಲವಿಜ್ಞಾನ, ಕೇಂದ್ರ ಅಂತರ್ಜಲ ಮಂಡಳಿ ಆಯುಷ್ ಕೇಶರ್ವಾಣಿಯನ್ನೊಳಗೊಂಡ ತಂಡ ಫೆ.6ರಂದು ಜಿಲ್ಲೆಯ ವಿಜಯಪುರ ತಾಲೂಕಿನ ಹೆಗಡಿಹಾಳ, ಐನಾಪುರ ಹಾಗೂ ಹಡಗಲಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ಪರಿಶೀಲನೆ ನಡೆಸಿತು.

ಹೆಗಡಿಹಾಳ ಗ್ರಾಮ ಅಮೃತ ಸರೋವರ, ಬೋರ್ ವೆಲ್ ಮರು ಪೂರಣ ಘಟಕ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರು. ನಂತರ ಅಮೃತ ಸರೋವರ ಒಳಹರಿವು ಹಾಗೂ ಹೊರಹರಿವುಗಳ ಕುರಿತು ಅಲ್ಲಿನ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಬಳಿಕ ಐನಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಸ್ತೆ ಬದಿ ಇರುವ ಬೋರ್ ವೆಲ್ ಮರು ಪೂರಣ ಘಟಕ ಮತ್ತು ಸರ್ಕಾರಿ ಶಾಲಾ ಕಟ್ಟಡದ ಮಳೆ ನೀರು ಕೊಯ್ಲು ಘಟಕ ಕಾಮಗಾರಿಗಳನ್ನು ವೀಕ್ಷಣೆ ಮಾಡಿದರು. ಇದೇ ವೇಳೆ ಹಡಗಲಿ ಗ್ರಾಮದ ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ನೆಡು ತೋಪು, ಸಾಮಾಜಿಕ ಅರಣ್ಯ ಇಲಾಖೆಯ ನರ್ಸರಿ ಕಾಮಗಾರಿಗಳಿಗೆ ಭೇಟಿ ನೀಡಿ ಅಲ್ಲಿನ ಸಸಿಗಳಿಗೆ ಸಮಯಕ್ಕೆ ತಕ್ಕಂತೆ ನೀರು ಪೂರೈಸಿ ಗಿಡಗಳು ನಾಶವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಹಡಗಲಿ ಕೆರೆಯಿಂದ ಹಡಗಲಿ ಎಲ್.ಟಿ 2 ತಾಂಡಾದ ಜನರಿಗೆ ನೀರು ಸರಬರಾಜಾಗುತ್ತಿರುವ ಕುರಿತು ಮಾಹಿತಿ ಪಡೆದ ಅಧಿಕಾರಿಗಳು, ತಾಂಡಾದ ಜನರೊಂದಿಗೆ ಕುಡಿಯುವ ನೀರಿನ ಕುರಿತು ಸಂವಾದ ನಡೆಸಿದರು. ಸಾರ್ವಜನಿಕರಿಗೆ ಸರಬಾರಾಜು ಆಗುವ ಕುಡಿಯುವ ನೀರಿನ ಗುಣಮಟ್ಟವನ್ನು ಕಡ್ಡಾಯವಾಗಿ ಪರಿಶೀಲಿಸಿ ಸರಬರಾಜು ಮಾಡಲು ಸ್ಥಳದಲ್ಲಿನ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ವಿಜಯಪುರ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ. ಹೊಂಗಯ್ಯ, ಚಡಚಣ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಂಜಯ ಖಡಗೇಕರ, ನಿಡುಗುಂದಿ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ವೀರೇಶ ಹಿರೇಮಠ, ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳು, ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಬೇಡಿಕೆ ಈಡೇರುವವರೆಗೂ ಧರಣಿ ಕೈಬಿಡಲು ಒಪ್ಪದ ಪ್ರತಿಭಟನಾಕಾರರು

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ

**ಉದಯರಶ್ಮಿ ನ್ಯೂಸ್**




ಕಲಕೇರಿ: ವಿಜಯಪುರ ಜಿಲ್ಲಾ ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯ, ಅಂಬುಲನ್ಸ್ ಸೇರಿಂದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಅಂಬೇಡ್ಕರ್ ಸೇನೆ ಮತ್ತು ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಯುತ್ತಿದೆ.

ಸದರಿ ಈ ಆರೋಗ್ಯ ಕೇಂದ್ರದಕ್ಕೆ ಸುತ್ತಮುತ್ತಲಿನ ಸುಮಾರು 35 ಹಳ್ಳಿಗಳ ಬಡ ಜನರು ತಮ್ಮ ಆರೋಗ್ಯ ತಪಾಸಣೆಗೆ ಬರುತ್ತಾರೆ. ಆದರೆ ಈ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅವಶ್ಯಕತೆಗೆ ತಕ್ಕಂತೆ ಸಿಬ್ಬಂದಿಗಳು ಇರದೇ ಇರುವುದರಿಂದ ರೋಗಿಗಳಿಗೆ ಸರಿಯಾದ ಸಮಯದಲ್ಲಿ ಚಿಕಿತ್ಸೆ ದೊರೆಯುತ್ತಿಲ್ಲ. ಮತ್ತು ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾಗಿ ಉಪಚರಿಸಲು ಅವಶ್ಯಕ ಸಲಕರಣೆಗಳು ಕೂಡಾ ಇರುವುದಿಲ್ಲ. ಹಾಗೂ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕೂಡಾ ಇದೆ. ಹೆಸರಿಗೆ ಮಾತ್ರ 30 ಹಾಸಿಗೆಯ ಆಸ್ಪತ್ರೆ ಒಳಗಡೆ ಯಾವ ಸೌಲಭ್ಯವು ಇರುವುದಿಲ್ಲ. ಇನ್ನು ಆಸ್ಪತ್ರೆಯಲ್ಲಿ ಕೇವಲ ಇಬ್ಬರು ವೈದ್ಯರಿದ್ದು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇನ್ನು 4 ಸಿಬ್ಬಂಧಿಗಳು ಇಲ್ಲಿ ಕಾರ್ಯನಿರ್ವಹಿಸದೇ ಡೆಪ್ಟೇಷನ್ ಮೇಲೆ ಹೋಗಿ ಇಲ್ಲಿ ಸಿಬ್ಬಂದಿ ಕೊರತೆ ಉಂಟಾಗಿದ್ದು, ಕೂಡಲೇ ಅವರನ್ನು ವಾಪಸ್ ಕರೆಸುವಂತೆ ಧರಣಿನಿರತರು ಆಗ್ರಹಪಡಿಸಿದರು.

ಅಂಬೇಡ್ಕರ್ ಸೇನೆ ತಾಲ್ಲೂಧ್ಯಕ್ಷರಾದ ಗೋಪಾಲ ಹಣಮಂತ ಕಟ್ಟಿಮನಿ ಮತ್ತು ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಅಧ್ಯಕ್ಷರಾದ ಡಿ. ಕೆ. ದೊಡಮನಿ ಹಾಗೂ ಅಂಬೇಡ್ಕರ್ ಸೇನೆ ತಾಲೂಕು ಉಪಾಧ್ಯಕ್ಷರಾದ ಸಂಜೀವ ಎಸ್ ಉತಾಳೆ, ಮುಖಂಡರಾದ ಹಣಮಂತ ವಡ್ಡರ ಹಾಗೂ ವಿವಿಧ ಪದಾಧಿಕಾರಿಗಳು ಮಾತನಾಡಿ, ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅಂಬುಲನ್ಸ್, 108 ವಾಹನ, ಶುಶ್ರೂಷಾಧಿಕಾರಿ, ಫಾರ್ಮಸಿ ಅಧಿಕಾರಿ ಹಾಗೂ ಲಿಫಿಕ್ ವರ್ಗ ಸಿಬ್ಬಂದಿ ಸೇರಿದಂತೆ ಖಾಲಿ ಇರುವ 25 ಹುದ್ದೆಗಳನ್ನು ಭರ್ತಿ ಮಾಡುವುದು ಮತ್ತು ಆಸ್ಪತ್ರೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವವರೆಗೂ ಅಹೋರಾತ್ರಿ ಧರಣಿ ಸತ್ಯಾಗ್ರಹ ಮುಂದುವರೆಸುವುದಾಗಿ ಪ್ರತಿಭಟನಾಕಾರರು ಹೇಳಿದರು.

ಕಾಶಿನಾಥ್ ಕಟ್ಟಿಮನಿ, ಮಹಾದೇವ ಅಸ್ಕಿ, ಪರಶುರಾಮ ನಾಲತವಾಡ, ನಾಗರಾಜ್ ಗಜಕೋಶ, ಮಡು ಚಲವಾದಿ, ಮಲ್ಲಿಕಾರ್ಜುನ್ ಕಟ್ಟಿಮನಿ, ಸುನೀಲ್ ಕಲಕೇರಿ, ಅರ್ಜುನ ನಡುವಿಮನಿ, ಬಸವರಾಜ ಕಾಂಬಳೆ, ದೇವು ವಡ್ಡರ, ಉಮೇಶ್ ಕೆರುಟಗಿ ಸೇರಿದಂತೆ ಇತರರು ಇದ್ದರು.

ಈ ವೇಳೆ ಸ್ಥಳಕ್ಕಾಗಮಿಸಿದ ತಾಲೂಕ ಆರೋಗ್ಯ ಅಧಿಕಾರಿ ಡಾ. ಎ.ಎ.ಮಾಗಿ ಅವರು ಧರಣಿ ಸತ್ಯಾಗ್ರಹ ನಿರತರೊಂದಿಗೆ ಸಮಾಲೋಚಿಸಿ ಅವರ ಬೇಡಿಕೆಗಳನ್ನು ಸ್ವೀಕರಿಸಿ ಮನವೊಲಿಸಲು ನಡೆಸಿದ ಪ್ರಯತ್ನ ವಿಫಲವಾದಾಗ ಮೇಲಾಧಿಕಾರಿಗಳ ಗಮನಕ್ಕೆ ತಂದು ಬೇಡಿಕೆ ಈಡೇರಿಸುವ ಪ್ರಯತ್ನ ಮಾಡುವುದಾಗಿ ಹೇಳಿ ಹೋದರು.

# ಸಂವಿಧಾನ ಸರ್ವಜನರ ಅಭಿವೃದ್ಧಿಗೆ ಸಹಕಾರಿ :ಗಂಗೂರ



**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತದ ಸಂವಿಧಾನ ಶ್ರೇಷ್ಠವಾದ ಸಂವಿಧಾನವಾಗಿದೆ. ಸಂವಿಧಾನ ಸರ್ವಜನರ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಮಮದಾಪುರ ಗ್ರಾಮ ಪಂಚಾಯತ್ ಅಧ್ಯಕ್ಷ ಮಲ್ಲಿಕಾರ್ಜುನ ಗಂಗೂರ ಅವರು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡ ಸಂವಿಧಾನ ಜಾಗೃತಿ ಜಾಥಾದ ಸ್ತಬ್ಧಚಿತ್ರಕ್ಕೆ ಮಮದಾಪುರ ಗ್ರಾಮದಲ್ಲಿ ಫೆ.6 ರಂದು ಅದ್ದೂರಿಯಾಗಿ ಸ್ವಾಗತಿಸಿ, ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ಸಂವಿಧಾನ ಪ್ರತಿಯೊಬ್ಬರು ಸಮಾನವಾದ ಹಕ್ಕನ್ನು ಒದಗಿಸಿದೆ. ಅನೇಕತೆಯಲ್ಲಿ ಏಕತೆಯನ್ನು ಸಾರುವ ಶ್ರೇಷ್ಠವಾದ ಸಂವಿಧಾನವಾಗಿದೆ ಎಂದು ಹೇಳಿದರು.

ಸಂವಿಧಾನ ಜಾಗೃತಿ ಜಾಥಾದ ಸ್ತಬ್ಧಚಿತ್ರವು ಬಬಲೇಶ್ವರ ತಾಲೂಕಿನ ದೇವರಗೆಣ್ಣೂರ, ಜೈನಾಪುರ, ಮಮದಾಪುರ ಗ್ರಾಮಗಳಲ್ಲಿ ಸಂಚರಿಸಿ ಸಂವಿಧಾನ ಕುರಿತು ಜಾಗೃತಿ ಮೂಡಿಸಿತು.

ಈ ಸಂದರ್ಭದಲ್ಲೊಇ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಎಂ.ಪಾಟೀಲ, ನೋಡಲ್ ಅಧಿಕಾರಿ ಎಸ್.ಬಿ.ಪಾಟೀಲ, ಸೇರಿದಂತೆ ಗ್ರಾಮದ ಮುಖಂಡರು, ಗಣ್ಯರು, ಸಾರ್ವಜನಿಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂತೋಷ ಕಾಂಬಳೆ ಸಂವಿಧಾನ ಕುರಿತು ವಿವರವಾದ ಮಾಹಿತಿ ಒದಗಿಸಿದರು.

# ಫೆ.19ರಂದು ಶಿವಾಜಿ & ಫೆ.20ರಂದು ಸರ್ವಜ್ಞ ಜಯಂತಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾಡಳಿತದಿಂದ ಫೆಬ್ರವರಿ 19ರಂದು ಛತ್ರಪತಿ ಶಿವಾಜಿ ಜಯಂತಿ ಹಾಗೂ ಫೆ.20ರಂದು ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಫೆಬ್ರವರಿ 19ರಂದು ಛತ್ರಪತಿ ಶಿವಾಜಿ ಜಯಂತಿ ಅಂಗವಾಗಿ ಶಿವಾಜಿ ಸರ್ಕಲ್ ದಿಂದ ಅಂದು ಬೆಳಿಗ್ಗೆ 9:30ಕ್ಕೆ ಛತ್ರಪತಿ ಶಿವಾಜಿ ಅವರ ಭಾವಚಿತ್ರದ ಮೆರವಣಿಗೆ ಹಾಗೂ ಕಂದಗಲ್ ಶ್ರೀ ಹನುಂತರಾಯ ರಂಗಮಂದಿರದಲ್ಲಿ 11 ಗಂಟೆಗೆ ಸಭಾ ಕಾರ್ಯಕ್ರಮ ಹಾಗೂ ಉಪನ್ಯಾಸಕರಿಂದ ಉಪನ್ಯಾಸ ಕಾರ್ಯಕ್ರಮ ನೀಡುವುದು.

ಸಂತ ಕವಿ ಸರ್ವಜ್ಞ ಜಯಂತಿಯನ್ನು ಫೆ.20ರಂದು ಆಚರಿಸಲಾಗುವುದು ಅಂದು ಬೆಳಿಗ್ಗೆ 9:30ಕ್ಕೆ ಶ್ರೀ ಸಿದ್ಧೇಶ್ವರ ದೇವಸ್ಥಾನದಿಂದ ಮೆರವಣಿಗೆ ಬೆಳಿಗ್ಗೆ 11 ಗಂಟೆಗೆ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸಭಾ ಕಾರ್ಯಕ್ರಮ ನಡೆಯುವುದು.

ಆಮಂತ್ರಣ ಮುದ್ರಣ ಹಾಗೂ ವಿತರಣೆ, ಶಿಷ್ಠಾಚಾರದಂತೆ ಅತಿಥಿ ಗಣ್ಯರಿಗೆ ಅಹ್ವಾನ, ವೇದಿಕೆ ಅಲಂಕಾರ, ಕುಡಿಯುವ ನೀರಿನ ವ್ಯವಸ್ಥೆ, ಸಮರ್ಪಕ ವಿದ್ಯುತ್ ವ್ಯವಸ್ಥೆ, ಸೂಕ್ತ ಆಸನದ ವ್ಯವಸ್ಥೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಈ ಸಭೆಯಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರಣಕುಮಾರ್, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತ–ರಿದ್ದರು.

## ಕೇಂದ್ರ ಜಲ ಶಕ್ತಿ ತಂಡದಿಂದ ಮಹಾತ್ಮಗಾಂಧಿ ನರೇಗಾ–ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ

# ಅಂತರ್ಜಲ ಮಟ್ಟ ಹೆಚ್ಚಿಸಲು ಕಾಮಗಾರಿ ಅನುಷ್ಠಾನಕ್ಕೆ ಸೂಚನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಂತರ್ಜಲ ಮಟ್ಟ ಹೆಚ್ಚಿಸುವ ಕಾಮಗಾರಿಗಳಾದ ಮಳೆನೀರು ಕೊಯ್ಲು ಘಟಕ, ಬೋರ್ ವೆಲ್ ಮರುಪೂರಣ ಘಟಕ ಹಾಗೂ ವಿವಿಧ ಕಾಮಗಾರಿಗಳನ್ನು ವೈಜ್ಞಾನಿಕವಾಗಿ ಹಾಗೂ ನಿಯಮಾನುಸಾರ ಹಮ್ಮಿಕೊಳ್ಳುವಂತೆ ಅಧಿಕಾರಿಗಳಿಗೆ ಕೇಂದ್ರ ಜಲ ಶಕ್ತಿ ತಂಡದ ಅಧಿಕಾರಿಗಳು ಸೂಚಿಸಿದರು.

ಗಣಿ ಸಚಿವಾಲಯದ ನಿರ್ದೇಶಕರು ಹಾಗೂ ಕೇಂದ್ರ ಜಲ ಶಕ್ತಿ ತಂಡದ ಕೇಂದ್ರ ನೋಡಲ್ ಅಧಿಕಾರಿಗಳಾದ ವಿವೇಕ ಕುಮಾರ ಶರ್ಮಾ ಮತ್ತು ವಿಜ್ಞಾನಿಗಳು, ಜಲವಿಜ್ಞಾನ, ಕೇಂದ್ರ ಅಂತರ್ಜಲ ಮಂಡಳಿ ಆಯುಷ್ ಕೇಶರ್ವಾಣಿಯನ್ನೊಳಗೊಂಡ ತಂಡದಿಂದ ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಭೆ ನಡೆಸಿ ಮಹಾತ್ಮ ಗಾಂಧಿ ನರೇಗಾ



ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಲಾಯಿತು.

ಜಲಾನಯನ ಕಾಮಗಾರಿಗಳನ್ನು ಜಿಯೋ ಟ್ಯಾಗ್ ಮಾಡಬೇಕು. ಜಲ ಶಕ್ತಿ ಅಭಿಯಾನದ ಅಡಿಯಲ್ಲಿ(ಎಖಂ) ಅಡಿ ಅನುಷ್ಠಾನಗೊಳಿಸುವ ಕಾಮಗಾರಿಗಳನ್ನು ಹಾಗೂ ಮುಕ್ತಾಯಗೊಂಡ ಅಮೃತ ಸರೋವರ ಕಾಮಗಾರಿಗಳನ್ನು ಕಡ್ಡಾಯವಾಗಿ ಜಲ ಶಕ್ತಿ ಅಭಿಯಾನ(–ಎಖಂ)ದ ಆಪ್ ನಲ್ಲಿ ಜಿಯೋಟ್ಯಾಗ್ ಮಾಡಬೇಕು. ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟದ ಪರಶೀಲನೆ ನಡೆಸಬೇಕು ಜಿಲ್ಲೆಯಲ್ಲಿ ನೀರಾವರಿ ಪ್ರದೇಶವು ಈಗ 302888 ಹೆಕ್ಟೇರ್ ಇದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣ ನೀರಾವರಿ ಪ್ರದೇಶವನ್ನು ವಿಸ್ತರಿಸಬೇಕು ಎಂದರು.

ಪ್ರಸ್ತುತ ಬರಗಾಲ ಘೋಷಣೆಯಾಗಿರುವುದರಿಂದ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹಾಗೂ ಅನುಷ್ಠಾನ ಇಲಾಖೆಗಳ ಅಡಿಯಲ್ಲಿ ಹಮ್ಮಿಕೊಂಡಿರುವ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಎನ್.ಆರ್.ಎಮ್ ಕಾಮಗಾರಿಗಳಾದ ಕೆರೆ ಅಭಿವೃದ್ಧಿ/ಹೂಳೆತ್ತುವುದು, ಅಮೃತ ಸರೋವರ ಕಾಮಗಾರಿಗಳು, ನಾಲಾ/ಹಳ್ಳ ಹೂಳೆತ್ತುವುದು, ಕೃಷಿ ಹೊಂಡ, ಬದು ನಿರ್ಮಾಣ, ಅರಣ್ಯ ಇಲಾಖೆಯಡಿ ನೆಡುತೋಪು ನಿರ್ಮಾಣ, ತೋಟಗಾರಿಕೆ ಕಾಮಗಾರಿಗಳು, ಕೃಷಿ ಇಲಾಖೆ ಕಾಮಗಾರಿಗಳ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಯಿತು.

ಇದೇ ವೇಳೆ ಜಿಲ್ಲಾ ಪಂಚಾಯತಿಯ ಆವರಣದಲ್ಲಿರುವ ಜಲ ಶಕ್ತಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಿಷಿ ಆನಂದ್ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ಡಾ. ವಿಜಯ ಕುಮಾರ ಆಜೂರ ಹಾಗೂ ಅನುಷ್ಠಾನ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಚಿಮ್ಮಡದಲ್ಲಿ ಕಸಾಪ ತಾಲ್ಲೂಕು ಸಮ್ಮೇಳನ ನಿರ್ಧಾರ

**ಉದಯರಶ್ಮಿ ನ್ಯೂಸ್**



ಚಿಮ್ಮಡ: ಜಿಲ್ಲಾ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ರಬಕವಿ–ಬನಹಟ್ಟಿ ಮೂರನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಚಿಮ್ಮಡ ಗ್ರಾಮದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ಚಿಮ್ಮಡ ಗ್ರಾಮದ ವಿರಕ್ತಮಠದಲ್ಲಿ ಸೋಮವಾರ ಸಂಜೆ ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಶೀಘ್ರದಲ್ಲೇ ಸಮ್ಮೇಳನ ದಿನಾಂಕ ಪ್ರಕಟಿಸುವ ಕುರಿತು ತಿಳಿಸಲಾಯಿತು.

ವಿರಕ್ತಮಠದ ಪ್ರಭುಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಸಮ್ಮೇಳನ ಹಮ್ಮಿಕೊಳ್ಳುವ ಬಗ್ಗೆ, ಅದರಸಿದ್ಧತೆಗಳು, ರೂಪುರೇಷೆಗಳು, ಸಂಪನ್ಮೂಲ ಕ್ರೋಢೀಕರಣದಬಗ್ಗೆ ಗ್ರಾಮದ ಹಿರಿಯರು ಹಾಗೂ ಪ್ರಮುಖರ ಸಭೆ ನಡೆಸಲಾಗುವುದು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯ ಪರಿಷತ್ತು ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ನಿರಂತರವಾಗಿ ಮುನ್ನಡೆಸಿಕೊಂಡು ನಡೆದಿದೆ. ಗ್ರಾಮೀಣ ಭಾಗದಲ್ಲಿ ಸಾಹಿತ್ಯ ಸಮ್ಮೇಳನ ನಡೆಸಬೇಕೆಂಬ ಸದುದ್ದೇಶದಿಂದ ಚಿಮ್ಮಡ ಗ್ರಾಮದಲ್ಲಿ ಪೂಜ್ಯರ, ಹಿರಿಯರ ಮಾರ್ಗದರ್ಶನದಲ್ಲಿ ನಡೆಸಲಾಗುವುದು. ಸಮ್ಮೇಳನ ಆಯೋಜಿಸಲು ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು.

ಪತ್ರಕರ್ತ ಮಲ್ಲಿಕಾರ್ಜುನ ಹೆಗ್ಗಳಗಿ, ಹಿರಿಯರಾದ ಆರ್.ವೈ. ಮುಗಳಖೋಡ, ಪ್ರಭು ಪಾಲಭಾವಿ, ಹಿರಿಯ ಸಾಹಿತಿ ಎಂ.ಎಸ್.ಬದಾಮಿ, ಕಸಾಪ ತಾಲ್ಲೂಕು ಅಧ್ಯಕ್ಷ ಮ.ಕೃ. ಮೇಗಾಡಿ ಮಾತನಾಡಿದರು.

ಪುಂಡಲೀಕಪ್ಪ ಪೂಜಾರಿ, ಬಾಳಪ್ಪ ಹಳಿಂಗಳಿ, ಬಿ.ಎಸ್.ಪಾಟೀಲ, ರಾಮಣ್ಣ ಬಗನಾಳ ,ಪ್ರಕಾಶ ಪಾಟೀಲ,ಪ್ರಭು ಮುಧೋಳ, ಮನೋಜ ಹಟ್ಟಿ, ಅವ್ವನಪ್ಪ ಮುಗಳಖೋಡ, ಜಿ. ಎಸ್.ವಡಗಾಂವಿ, ಮೃತ್ಯುಂಜಯರಾಮದುರ್ಗ, ಈರಣ್ಣಗಣಮುಖಿ, ಬಿ.ಎಂ.ಮಟ್ಟಿಕಲ್ಲಿ, ಜಿ.ಎಸ್.ಗೊಂಬಿ, ಶರತ್‌ಜಂಬಗಿ, ಮಲ್ಲು ತುಂಗಳ, ಇಲಾಹಿ ಜಮಖಂಡಿ, ಬಸವರಾಜ ಮೇಟಿ, ಗಂಗಾಧರ ಮೋಪಗಾರ ಉಪಸ್ಥಿತರಿದ್ದರು.

# ಗ್ರಂಥಾಲಯ ಸಂಘದ ಜಿಲ್ಲಾ ಅಧ್ಯಕ್ಷ, ಕಾರ್ಯದರ್ಶಿ ಆಯ್ಕೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯ ಗ್ರಂಥಾಲಯ ಮೇಲ್ವಿಚಾರಕ ಸಂಘದ ಅಧ್ಯಕ್ಷರಾಗಿ ಶಿವಾನಂದ ದೇಸಾಯಿ, ಪ್ರಧಾನಕಾರ್ಯದರ್ಶಿಯಾಗಿ ಶಿವಶಂಕರ ಉಕುಮನಾಳ ಮರು ಆಯ್ಕೆ ಮಾಡಲಾಯಿತು.



ವಿಜಯಪುರದ ಗಗನ ಮಹಲ್ ನಲ್ಲಿ ನಡೆದ ಜಿಲ್ಲೆಯ ಎಲ್ಲಾ ಮೇಲ್ವಿಚಾರಕರ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಮೇಲ್ವಿಚಾರಕರು ಭಾಗವಹಿಸಿ ಈಗಿರುವ ಅಧ್ಯಕ್ಷ, ಪ್ರಧಾನಕಾರ್ಯದರ್ಶಿ ಆಯ್ಕೆ ಮಾಡಿ ಠರಾವು ಕೈಗೊಳ್ಳಲಾಯಿತು.

ನೂತನ ಅಧ್ಯಕ್ಷ ಶಿವಾನಂದ ದೇಸಾಯಿ ಮಾತನಾಡಿ ಎಲ್ಲ ಮರುಆಯ್ಕೆ ಮಾಡಿದ ಎಲ್ಲ ಮೇಲ್ವಿಚಾರಕರಿಗೆ ಧನ್ಯವಾದಗಳು, ನನ್ನ ಜವಾಬ್ದಾರಿ ಹೆಚ್ಚಾಗಿದೆ ನೀವು ಕೊಟ್ಟಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿ ನಾನು ಮತ್ತು ಕಾರ್ಯದರ್ಶಿ ಸೇರಿಕೊಂಡು ವಿಜಯಪುರ ಜಿಲ್ಲೆಯ ಸಂಘವನ್ನು ಮಾದರಿ ಸಂಘವನ್ನಾಗಿ ಮಾಡುವುದರ ಜೊತೆಗೆ ಸಂಘದ ಕಛೇರಿಗಾಗಿ ಸ್ಥಳಿಯ ಶಾಸಕರನ್ನು ಭೇಟಿಯಾಗಿ ಜಾಗವನ್ನು ಪಡೆಯುವದು, ಕೋ ಆಪರೇಟಿವ್ ಬ್ಯಾಂಕ್ ತೆರೆಯುವ ಉದ್ದೇಶ ಹೊಂದಲಾಗಿದೆ ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಭರವಸೆ ನೀಡಿದರು.

ಹಿರಿಯ ಮೇಲ್ವಿಚಾರಕ ಮಹಾಂತಗೌಡ ಕಾಶಿನಕುಂಟಿ ಮಾತನಾಡಿ ಸತತ 9 ವರ್ಷಗಳ ಕಾಲ ಜಿಲ್ಲಾಅಧ್ಯಕ್ಷ ಶಿವಾನಂದ ದೇಸಾಯಿ, ಪ್ರಧಾನಕಾರ್ಯದರ್ಶಿ ಶಿವಶಂಕರ ಉಕುಮನಾಳ ಅವರು ವಿಜಯಪುರ ಜಿಲ್ಲೆಯ ಸಂಘವನ್ನು ರಾಜ್ಯಮಟ್ಟದಲ್ಲಿ ಹೆಸರುವಾಸಿ ಮಾಡುವುದರೊಂದಿಗೆ ಮೇಲ್ವಿಚಾರಕರ 30 ವರ್ಷಗಳ ಬೇಡಿಕೆ ಯಾಗಿದ್ದ ಕನಿಷ್ಠ ವೇತನ ಜಾರಿ ಸಂಭಂಧ ನಮ್ಮ ಪದಾಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು ಅವರನ್ನು ಅಭಿನಂದಿಸಿದರು.

ಸಭೆಯಲ್ಲಿ ಪಿ.ಸಿ.ಬಿರಾದಾರ, ಮಹಾಂತಗೌಡ ಕಾಶಿನಕುಂಟಿ, ಶರಣಗೌಡ ಕೋಳೂರ, ಸಿ.ಎ.ಕುಲಕರ್ಣಿ, ಬಸವನ ಬಾಗೇವಾಡಿ ತಾಲೂಕು ಅಧ್ಯಕ್ಷ ಭೀಮಸಿಂಗ್ ರಾಠೋಡ, ಕಾರ್ಯದರ್ಶಿ ವಿಠ್ಠಲ ಗೂಗಿಹಾಳ, ಮುದ್ದೇಬಿಹಾಳ ತಾಲೂಕು ಅಧ್ಯಕ್ಷ ಎಸ್.ಬಿ.ಪಾಟೀಲ್,ಕಾರ್ಯದರ್ಶಿ ಮಲ್ಲನಗೌಡ ಬಿರಾದಾರ, ಇಂಡಿ ತಾಲೂಕು ಅಧ್ಯಕ್ಷ ಪ್ರಶಾಂತಗೌಡ ಪಾಟೀಲ, ಕಾರ್ಯದರ್ಶಿ ಶಾರೂಬಾಯಿ ರಾಠೋಡ, ವಿಜಯಪುರ ತಾಲೂಕು ಅಧ್ಯಕ್ಷ ರವಿಧರಣಾಕರ, ಕಾರ್ಯದರ್ಶಿ ರಾಜು ಮೇಲಕೇರಿ,ಸಿಂದಗಿ ತಾಲೂಕು ಅಧ್ಯಕ್ಷ ಗುರು ಹಿರೇಮಠ, ಕಾರ್ಯದರ್ಶಿ ಶಂಕರ ಅಗಸರ, ಕೃಷ್ಣಾ ಮುತ್ತಗಿ, ಮುತ್ತು ಸಗರಿ, ರಮೇಶ ಕುಂಬಾರ, ಸಂತೋಷ ಬಜಂತ್ರಿ, ಗುರುಬಸು ಖೇಡಗಿ, ಇಸ್ಮಾಯಿಲ್ ಪೀರಾಪುರ,ಶ್ರೀಮತಿ ಸುಶಿಲಾ ಪ್ರಧಾನಿ, ಮುಕ್ತಾಬಾಯಿ ಹೆಗಡೆ, ಶಾರದಾಬಾಯಿ ಯತ್ನಾಳ, ಮೀರಾಬಾಯಿ ಪವಾರ, ಎ.ವಾಯ್.ಬನಸೋಡೆ, ಎಸ್.ಎಸ್. ಅಂಗಡಿ (ಹಿಟ್ನಳ್ಳಿ) ಶಂಕ್ರೆಮ್ಮ ಲೋಕುರೆ, ಶಿಲ್ಪಾ ಗೊಳಸಂಗಿ ಸೇರಿದಂತೆ ಜಿಲ್ಲೆಯ ನೂರಾರು ಗ್ರಂಥಾಲಯ ಮೇಲ್ವಿಚಾರಕರು ಭಾಗವಹಿಸಿದ್ದರು.

# ಇಂದು ಪೂರ್ವಭಾವಿ ಸಭೆ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ತಹಸೀಲ್ದಾರ ಕಚೇರಿಯ ಸಭಾಂಗಣದಲ್ಲಿ ಫೆ.7 ರಂದು ಬೆಳಗ್ಗೆ 11 ಗಂಟೆಗೆ ಫೆ.10 ರಂದು ಆಚರಿಸಲ್ಪಡುವ ಕಾಯಕ ಶರಣರ ಜಯಂತಿ, ಫೆ.15 ರಂದು ಆಚರಿಸಲ್ಪಡುವ ಸಂತ ಸೇವಾಲಾಲ್ ಜಯಂತಿ ಆಚರಣೆ ಕಾರ್ಯಕ್ರಮವನ್ನು ತಾಲೂಕಾಡಳಿತದಿಂದ ಆಚರಣೆ ಮಾಡುವ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಸಭೆಗೆ ಎಲ್ಲ ಇಲಾಖೆಯ ಮುಖ್ಯಾಧಿಕಾರಿಗಳು, ಮಾದರ ಚನ್ನಯ್ಯ, ಮಾದರ ದೂಳಯ್ಯ, ಸಮಗಾರ ಹರಳಯ್ಯ,ಡೋಹರ ಕಕ್ಕಯ್ಯ, ಉರಲಿಂಗ ಪೆದ್ದಿ ಸಮುದಾಯದ ಮುಖಂಡರು, ತಾಲೂಕಿನ ಸಮಸ್ತ ಎಸ್ಸಿ,ಎಸ್ಟಿ ಜನಾಂಗ ಬಾಂಧವರು, ಬಂಜಾರ ಸಮಾಜದ ಅಧ್ಯಕ್ಷರು, ಸರ್ವ ಪದಾಧಿಕಾರಿಗಳು, ಮುಖಂಡರು, ತಾಲೂಕಿನ ಸಮಸ್ತ ವಿವಿಧ ಸಮಾಜದ ಬಾಂಧವರು, ವಿವಿಧ ಸಂಘಟನೆಯ ಪದಾಧಿಕಾರಿಗಳು, ಗಣ್ಯರು ಆಗಮಿಸಿ ಸಲಹೆ–ಸೂಚನೆ ನೀಡಬೇಕೆಂದು ತಹಸೀಲ್ದಾರ ವೈ. ಎಸ್.ಸೋಮನಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾವ್ಯರಶ್ಮಿ

– ಕೆ.ಎನ್.ರೀನಾ, ಮೈಸೂರು
("ನಮ್ಮ ಕಥಾ ಅರಮನೆ" ಬರಹಗಾರರು)



### ಸಪ್ತಪದಿ

ಏಳು ಮನೆಯ ಕುಂಟೆ ಬಿಲ್ಲೆ
ನನ್ನ ಮನದ ಒಳಗೆ ಇಲ್ಲೆ
ಸುಖದ ಬದುಕು ಸ್ನೇಹದಲ್ಲೆ
ನಲ್ಲ ಜೊತೆಗೆ ನೆಗೆದ ನಲ್ಲೆ

ಅರ್ಥ ಮಾಡಿಕೊಂಡು ನಡೆದು
ಹೆಗಲು ಕೊಟ್ಟು ಮುಂದೆ ಹಡೆದು
ಬಂಧಕಾಗಿ ಅವನು ದುಡಿದು
ಬಂಧು ಬಳಗ ಮನೆಯ ಪಡೆದು

ಅರಿತು ಹೆಜ್ಜೆ ಅರ್ಥ ಧರ್ಮ
ಕಾಮಬೆರೆತರೊಂದೆ ಆತ್ಮ
ಸಪ್ತ ಪದಿಯ ಮದುವೆ ಮೋಡಿ
ಆಪ್ತ ಹೃದಯದೊಳಗೆ ಆಡಿ



# ಮುತ್ತಿನ ಹಾರ

## ಭಾವರಶ್ಮಿ



– ಗೀತಾ ಹೆಬ್ಬಾರ್
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**


ಬೆಳಿಗ್ಗೆ ಬೆಳಿಗ್ಗೆ ಬಾಗಿಲು ಬಡಿದ ಸದ್ದಾದಾಗ ಚಹಾ ಮಾಡುತ್ತಿದ್ದ ಕೇಶವಯ್ಯ ಹೊರಗೆ ಬಂದರು. ಯಾರಿರಬಹುದು ಇಷ್ಟೊತ್ತಿನಲ್ಲಿ. ತಾನು ಗೆಳತಿಯ ಮನೆಗೆ ಹೋಗುತ್ತೇನೆ, ಬರಲು ಎರಡು ದಿವಸಗಳಾಗುತ್ತವೆ ಎಂದು ಹೇಳಿದ್ದಳು. ಈಗಲೇ ಬಂದು ಬಿಟ್ಟಳಾ ?ನನಗೆ ಗೊತ್ತು. ಶಾಂಭವಿ ಪುಟ್ಟಾ , ನಿನಗೆ ಈ ಮಾವಯ್ಯನ ಬಿಟ್ಟಿರಲು ಸಾಧ್ಯವಿಲ್ಲವೆಂದು !! ಮುಗುಳ್ನಗುತ್ತಾ ಬಾಗಿಲನ್ನು ತೆಗೆದರು ಕೇಶವಯ್ಯ.

ಬಾಗಿಲಲ್ಲಿ ತಲೆ ತಗ್ಗಿಸಿ ಶಾಂಭವಿ ನಿಂತಿದ್ದಾಳೆ. ತಲೆಯ ತುಂಬಾ ಮಲ್ಲಿಗೆ ಹೂಗಳು!! ಕುತ್ತಿಗೆಯ ಸುತ್ತ ಹೂವಿನ ಹಾರ ಇಳಿಬಿಟ್ಟಿದೆ. ಕೊರಳಲ್ಲಿ ಸರ, ಬರಿಯ ಸರ ಅಲ್ಲ. ಕರಿ ಮಣಿ ಸರ ! ಒಂದು ಕ್ಷಣ ದಿಗ್ಭ್ರಾಂತರಾದರು ಕೇಶವಯ್ಯ !!!

'ಏನೇ ಇದು ನಿನ್ನ ಅವತಾರ!??ನಿನ್ನ ಮದುವೆಗೆ ಇನ್ನೂ ಒಂದು ತಿಂಗಳು ಬಾಕಿಯಿದೆ. ಮದುಮಗಳಾಗಿ ಹೇಗೆ ಕಾಣುತ್ತಿಯೆಂದು ಈಗಲೇ ಆತುರಾನಾ? ಮದು ಮಗಳ ವೇಷದಲ್ಲಿ ಬಂದು ಬಿಟ್ಟಿದ್ದೀಯಾ !!??'

'ಇಲ್ಲ ಮಾವಾ? ಇದು ವೇಷವಲ್ಲ !!ನಿಜವಾಗಲೂ ನಾನು ಮದು ಮಗಳೇ !! ಮುಂದಿನ ಬೀದಿಯಲ್ಲಿ ಮನೆಯಿದೆಯಲ್ಲವಾ. ಅದೇ ಸಂದೀಪ , ಆತನನ್ನು ದೇವಸ್ಥಾನದಲ್ಲಿ ಮದುವೆಯಾಗಿಬಿಟ್ಟೆ. ಸಂದೀಪ್ ಬಾ ಇಲ್ಲಿ. ಮಾವಯ್ಯನ ಆಶೀರ್ವಾದ ತೆಗೆದುಕೊಳ್ಳೋಣ.'

' ಯಾರೋ ನೀನು??ಓಹ್, ಕೆಲವು ವರ್ಷಗಳಿಂದ ನಮ್ಮ ಶಾಂಭವಿಯ ಹಿಂದೆ ಹಿಂದೆ



ಬಿದ್ದಿದ್ದೀಯಲ್ಲ. ಆತನೇ ಅಲ್ಲವಾ ನೀನು ?? ನಮ್ಮ ಶಾಂಭವಿಯ ಕೈ ಹಿಡಿಯಲು ಎಷ್ಟೋ ಧೈರ್ಯ ನಿನಗೆ?? ಶಾಂಭವಿ ನಿಜ ಹೇಳು ಕಂದಾ. ಇದು ಯಾವುದೋ ನಾಟಕಕ್ಕಾಗಿ ನೀವು ಹಾಕಿದ ವೇಷ !?? ಹೇಳಿಬಿಡು, ನಿನ್ನ ಬಾಯಿಯಿಂದಲೇ ಹೇಳಿಬಿಡು. '

ಇಲ್ಲಾ ಮಾವಯ್ಯ, ನಾನು ನಿಜವಾಗಿಯೂ ಸಂದೀಪನನ್ನು ಮದುವೆಯಾಗಿದ್ದೇನೆ. ನಿಮ್ಮ ಹತ್ತಿರ ಮಾತನಾಡಲು ನನಗೆ ಧೈರ್ಯ ಬರಲಿಲ್ಲ. ಶ್ಯಾಮ್ ನನ್ನು ಮದುವೆಯಾಗಲು ನನಗೆ ಇಷ್ಟವಿಲ್ಲ ! ಅದಕ್ಕೇ ಹಾಗೆ ಮಾಡಿದೆ.'

'ಇನ್ನು ಒಂದು ಮಾತನಾಡಿದರೂ ನಿನ್ನ ನಾಲಿಗೆಯನ್ನು ಸೀಳಿ ಬಿಡುತ್ತೇನೆ. ನೀನೊಂದು ಎರಡು ಮುಖದ ಹಾವೆಂದು ಗೊತ್ತಾಗದೆ ನಿನಗೆ ಆಶ್ರಯ ಕೊಟ್ಟೆ. ನನ್ನ ಮಗನ ಜೊತೆಗೆ ಮದುವೆನೂ ಮಾಡಬೇಕೆಂದಿದ್ದೆ. ಆದರೆ ನೀನು ನಿನ್ನ ಸ್ವಭಾವಕ್ಕೆ ತಕ್ಕಂತೆ ವಿಷ ಕಕ್ಕಿಬಿಟ್ಟೆ. ನಿಲ್ಲು ಅಲ್ಲೇ!! ಒಂದು ಹೆಜ್ಜೇನೂ ಮುಂದಿಡಬೇಡ. ಸೀದಾ ಒಳಗೆ ಹೋದ ಕೇಶವಯ್ಯ ಶಾಂಭವಿಯ ಬಟ್ಟೆ ಬರೆ ಸಹಿತ ಆಕೆಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನು ಹೊರಗೆ ತಂದು ಬಿಸಾಕಿದರು. ಇನ್ನುಮೇಲೆ ನಿನಗೂ ಈ ಮನೆಗೂ ಯಾವ ಸಂಬಂಧವೂ ಇಲ್ಲ.

'ಮಾವಯ್ಯ , ಆಶೀರ್ವಾದ ಮಾಡಿ.' ಎನ್ನುತ್ತಾ ಶಾಂಭವಿ ಜೊತೆಗೆ ಸಂದೀಪ್ ಕೇಶವಯ್ಯನ ಕಾಲಿಗೆ ಬೀಳಲು ಯತ್ನಿಸಿದರು.

'ಇದು ನೀನು ಆರಿಸಿಕೊಂಡ ಜೀವನ. ಹೇಗೆ ಬೇಕಾದರೂ ಬದುಕಿಕೊ ! ಈ ಜನ್ಮದಲ್ಲಿ ನನ್ನ ಆಶೀರ್ವಾದ ನಿನಗೆ ಸಿಗುವುದಿಲ್ಲ !'

ಕಾಲುಗಳನ್ನು ಒಳಗೆಳೆದುಕೊಂಡು ಇಬ್ಬರನ್ನೂ ಆಚೆ ನೂಕಿ ಬಾಗಿಲು ಹಾಕಿಕೊಂಡರು ಕೇಶವಯ್ಯ !

ಮಾವ ಎಸೆದ ತನಗೆ ಸಂಬಂಧಿಸಿದ ವಸ್ತುಗಳನ್ನು ಜೋಡಿಸಿಕೊಂಡು ಸಂದೀಪನ ಕೈ ಹಿಡಿದು ಕೊನೆಯದಾಗಿ ಎಂಬಂತೆ ತುಂಬಿದ ಕಂಗಳಿಂದ ಮಾವಯ್ಯನ ಮನೆಯತ್ತ ದೃಷ್ಟಿ ಹಾಯಿಸಿದಳು ಶಾಂಭವಿ. ತನ್ನ ಈ ನಡೆಗೆ ಯಾವುದು ತಪ್ಪು, ಯಾರಿಂದ ಆದ ತಪ್ಪು, ಯಾರಿಗೆ ಶಿಕ್ಷೆ ..ನೆನೆದು ಮನಸ್ಸು ಕಲಸು ಮೇಲೋಗರವಾಯಿತು.

ಮಾವಯ್ಯನ ಮನೆ ಕಣ್ಣಿನಿಂದ ದೂರವಾದರೂ ಇಷ್ಟು ವರ್ಷಗಳು ತನ್ನ ಜೀವನದಲ್ಲಿ ನಡೆದ, ತನ್ನ ಸ್ಮೃತಿಪಟಲದಲ್ಲಿ ಇನ್ನೂ ಜೀವಂತವಾಗಿರುವ ಘಟನೆಗಳು ಒಂದಾದ ಮೇಲೊಂದರಂತೆ ಹಾದುಹೋದವು ಶಾಂಭವಿಯ ಮನದಲ್ಲಿ.

ಆಗಿನ್ನೂ ಶಾಂಭವಿ ಆರರ ಕೂಸು !ಶಾಂಭವಿಯ ಅಪ್ಪ, ಅಮ್ಮ ಮಗಳ ಜೊತೆಗೆ ಒಂದು ಮದುವೆಯ ಕಾರ್ಯಕ್ರಮಕ್ಕೆ ಹೋಗಿದ್ದರು. ಅವರ ಜೊತೆಗೆ ಶಾಂಭವಿಯ ಮಾವನ (ಅಮ್ಮನ ಅಣ್ಣ ) ಕುಟುಂಬವೂ ಜೊತೆಯಾಗಿತ್ತು. ಶಾಂಭವಿಯ ಅಮ್ಮನ ಅಣ್ಣ, ಅತ್ತಿಗೆ ಹಾಗೂ ಅವರ ಹತ್ತು ವರ್ಷದ ಮಗ ಶ್ಯಾಮ್. ಮದುವೆ ಕಾರ್ಯಕ್ರಮ ಮುಗಿಸಿ ಹಿಂದಿರುಗಿ ಬರುವಾಗ ಭೀಕರ ಅಪಘಾತ ನಡೆದು ಹೋಗಿತ್ತು. ಶಾಂಭವಿಯ ಅಪ್ಪ, ಅಮ್ಮ, ಹಾಗೂ ಅತ್ತೆ ಸ್ಥಳದಲ್ಲೇ ಅಸು ನಿಗಿದ್ದರು. ಶಾಂಭವಿ, ಶ್ಯಾಮ್ ಹಾಗೂ ಮಾವ ಪವಾಡ ಸದೃಶವಾಗಿ ಬದುಕುಳಿದಿದ್ದರು ! ಕೊನೆಗೆ ಮಾವಯ್ಯನೇ ಶಾಂಭವಿಯನ್ನು ತನ್ನ ಮನೆಯಲ್ಲಿಟ್ಟುಕೊಂಡು ಸಾಕಿದ್ದರು.




ಶ್ಯಾಮ್ ಶಾಂಭವಿಗಿಂತ ನಾಲ್ಕು ವರ್ಷ ದೊಡ್ಡವನು. ಕಲಿಯುವುದರಲ್ಲಿ ತುಂಬಾ ಜಾಣ. ಇಂಜಿನಿಯರಿಂಗ್ ಪದವಿ ಇಂಡಿಯಾ ದಲ್ಲೇ ಮುಗಿಸಿ ಎಂ.ಎಸ್. ಪದವಿ ಗಳಿಸಲು ಅಮೆರಿಕಾಕ್ಕೆ ಹೋಗಿದ್ದ. ಎಂ. ಎಸ್. ಮುಗಿಸಿ ಅಲ್ಲೇ ಕೆಲಸಕ್ಕೂ ಸೇರಿದ್ದ.

ಶಾಂಭವಿಯನ್ನು ತನ್ನ ಮಗ ಶ್ಯಾಮ್ ನಿಗೆ ತಂದುಕೊಳ್ಳಬೇಕೆಂದು ಕೇಶವಯ್ಯನವರಿಗೆ ಒಂದು ಬಲವಾದ ಆಸೆ ! ಮದುವೆಯಾದ ಮೇಲೆ ಇಂಡಿಯಾಕ್ಕೆ ಬಂದು ಬಿಡು ಎಂದು ಹೇಳಬೇಕು. ಮಗ, ಸೊಸೆ, ಮೊಮ್ಮಕ್ಕಳ ಜೊತೆಗೆ ಹಾಯಾಗಿರಬೇಕು. ಚಿಕ್ಕ ವಯಸ್ಸಿನಿಂದಲೇ ಶ್ಯಾಮ್ ನೇ ನಿನ್ನ ಗಂಡ ಎಂದು ಮಾವಯ್ಯ ತಲೆ ತುಂಬಿದ್ದರು. ಅದೇ ಭಾವನೆ ತನಗೆ ಮನದಲ್ಲಿ ಗಾಢವಾಗಿ ತುಂಬಿಕೊಂಡಿತ್ತು. ಶ್ಯಾಮ್ ನೂ ಅದರಂತೆ ನಡೆದುಕೊಂಡಿದ್ದ.

ಕಳೆದ ವಾರ ಶ್ಯಾಮ್ ಊರಿಗೆ ಬಂದಿದ್ದ. ಕೇಶವಯ್ಯ ಈಗಲೇ ಮಗನ ಮದುವೆ ಮಾಡಬೇಕೆಂದು ನಿಶ್ಚಯಿಸಿದ್ದರು. ಪುರೋಹಿತರ ಹತ್ತಿರ ಮಾತನ್ನೂ ಆಡಿದ್ದರು. ಮುಂದಿನ ತಿಂಗಳೇ ಮದುವೆ ನಿಶ್ಚಯವಾಗಿತ್ತು !

ಆದಿನ ತನಗಿನ್ನೂ ನೆನಪಿದೆ. ಹೊರಗಡೆ ಹೋಗಿ ಬರೋಣವಾ ಶಾಂಭವಿ ಎಂದಾಗ ತನಗೆಷ್ಟು ಖುಷಿಯಾಗಿತ್ತು. ಮಾವಯ್ಯನೂ ಸಂತಸದಿಂದಲೇ ಒಪ್ಪಿಗೆ ನೀಡಿದ್ದರು. ತಾವಿಬ್ಬರೂ ಹೊರಟಾಗ ಮಾವಯ್ಯನ ಕಣ್ಣಿನಲ್ಲಿ ಮೂಡಿದ ಕಾಂತಿ ಈಗಲೂ ತನಗೆ ನೆನಪಿದೆ. ಮನೆಯಿಂದ ಇಬ್ಬರೂ ನಗು ನಗುತ್ತಲೇ ಹೊರಗೆ ನಡೆದಿದ್ದೆವು. ತನಗೆ ಮತ್ತು ಶ್ಯಾಮನಿಗೆ ಇಬ್ಬರಿಗೂ ಪ್ರಿಯವಾದ ಸ್ಥಳ ಊರಾಚೆಯ ನದಿಯ ದಡ. ಶ್ಯಾಮನ ಜೊತೆಗೆ ಎಷ್ಟೋ ಸಲ ಆ ಸ್ಥಳಕ್ಕೆ ತೆರಳಿದ್ದೆ. ಆದರೆ ಆತನ ಜೊತೆಗೆ ಮದುವೆ ನಿಶ್ಚಯವಾದಾಗಿನಿಂದ ಆತನ ಜೊತೆ ಮಾತಾಡಲು ಏನೋ ಸ್ತ್ರೀ ಸಹಜವಾದ ಸಂಕೋಚ ! ನದಿಯ ದಡದ ಮೇಲೆ ಅಕ್ಕ ಪಕ್ಕ ಇಬ್ಬರೂ ಕುಳಿತೆವು.

ಶಾಂಭವಿ ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕಿತ್ತು ಎಂದು ಶ್ಯಾಮ್ ನುಡಿದಾಗ ಎಷ್ಟು ಗೆಲುವಾಗಿದ್ದೆ ತಾನು. ಮುಂದಿನ ತಿಂಗಳೇ ಮದುವೆ. ಪ್ರೀತಿ ಪ್ರೇಮದ ವಿಷಯ ಬಿಟ್ಟು ಮತ್ತೇನಿರುತ್ತೆ !?? ಹೃದಯ ತುಂಬಿ ಬಂದಿತ್ತು ತನಗೆ.

'ಶಾಂಭವಿ, ನಾನು ಈಗ ಹೇಳುವ ಮಾತಿನಿಂದ ನಿನಗೆ ನೋವಾಗಬಹುದು. ಆದರೂ ಹೇಳಲೇ ಬೇಕು. ' ತನ್ನ ಸಂತಸವೆಲ್ಲ ಜರ್ರನೆ ಇಳಿದಿತ್ತು. ಆದರೂ ಏನು ಎಂಬಂತೆ ಶ್ಯಾಮ್ ನ ಮುಖ ನೋಡಿದ್ದೆ. ನನ್ನೆರಡು ಕೈಗಳನ್ನು ತನ್ನ ಬೊಗಸೆಯಲ್ಲಿ ಹಿಡಿದಿದ್ದ ಶ್ಯಾಮ್.

ಶಾಂಭವಿ ನಾನೊಂದು ತಪ್ಪು ಮಾಡಿಬಿಟ್ಟಿದ್ದೇನೆ. ನಾನು ಈಗಾಗಲೇ ಮದುವೆಯಾಗಿದ್ದೇನೆ ! ಎಲಿಸಾ ಎಂದು ಆಕೆಯ ಹೆಸರು. ಈ ವಿಷಯವನ್ನು ಅಪ್ಪನ ಮುಂದೆ ಹೇಳಲು ನನಗೆ ಧೈರ್ಯವಿಲ್ಲ. ನೀನು ಹೇಗಾದರೂ ಸರಿ. ನಮಗಿಬ್ಬರಿಗೆ ನಿಶ್ಚಯಿಸಿದ ಮದುವೆಯನ್ನು ನಿಲ್ಲಿಸಿಬಿಡು. ಒಳ್ಳೆಯ ಹುಡುಗನನ್ನು ಹುಡುಕಿ ನಾನೇ ಮುಂದೆ ನಿಂತು ನಿನ್ನ ಮದುವೆಯನ್ನು ನೆರವೇರಿಸುತ್ತೇನೆ. ಹೇಗಾದರೂ ನನ್ನನ್ನು ಕಾಪಾಡು ಶಾಂಭವಿ ' ಗೋಗರೆದಿದ್ದ ಶ್ಯಾಮ್.

ಆಕಾಶವೇ ನೆತ್ತಿಯ ಮೇಲೆ ಬಿದ್ದ ಹಾಗೇ ಆಗಿತ್ತು ತನಗೆ !ಎಷ್ಟೆಂದರೂ ಸ್ವಾಭಿಮಾನದ ಹೆಣ್ಣು ತಾನು ! ಶ್ಯಾಮ್ ನ ಮಾತಿಗೆ ಸಿಟ್ಟಿಗೇಳದೇ, ರಂಪ ಮಾಡದೇ, ರೊಚ್ಚಿಗೇಳದೇ ಮೌನವಾಗಿದ್ದೆ. ಆದರೂ ನಾಲಿಗೆ ಸುಮ್ಮನಿರಲಿಲ್ಲ.

'ಓಹ್, ಪ್ರತಿಸಲ ನೀನಿಲ್ಲಿಗೆ ಬಂದಾಗಲೆಲ್ಲ ನಾವು ಈ ಸ್ಥಳಕ್ಕೆ ಬರುತ್ತಿದ್ದೆವು. ಆ ಸಮಯದಲ್ಲಿ ಯಾವಾಗಲೂ ನಿನಗೆ ಫೋನ್ ಬರುತ್ತಿತ್ತು. ಅದೂ ಮಹಿಳೆಯಿಂದ !ಆಗೆಲ್ಲಾ ನೀನು ಆಕೆ ನಿನ್ನ ಬಿಸಿನೆಸ್ ಪಾರ್ಟ್ನರ್ ಎಂದು ಹೇಳುತ್ತಿದ್ದೆ. ಆಕೆನೆ ನಿನ್ನ ಲೈಫ್ ಪಾರ್ಟ್ನರ್ ಕೂಡಾ ಆಗಿದ್ದಳು ಅಲ್ಲವಾ!!??'

ತಲೆ ತಗ್ಗಿಸಿದ್ದ ಶ್ಯಾಮ್.

'ಸರಿ, ನಾನು ನಿನಗೆ ಪ್ರಮಾಣ ಮಾಡುತ್ತೇನೆ. ಹೇಗಾದರೂ ಮಾಡಿ ಈ ಮದುವೆ ನಿಲ್ಲಿಸುತ್ತೇನೆ.' ಶ್ಯಾಮ್ ನಿಗೆ ಮಾತು ಕೊಟ್ಟಿದ್ದೆ ತಾನು.

ತಾವಿಬ್ಬರೂ ಏನೂ ಆಗದವರಂತೆ ಅಲ್ಲಿಂದ ಹಿಂದಿರುಗಿದ್ದೆವು. ಮಾವಯ್ಯನಿಗೆ ನಮ್ಮಿಬ್ಬರ ವಿಷಯದಲ್ಲಿ ಯಾವ ಸಂಶಯವೂ ಬಂದಿರಲಿಲ್ಲ.

ಶ್ಯಾಮ್ ಫ್ರೆಂಡ್ಸ್ ಜೊತೆಗೆ ಟೂರ್ ಹೋಗ್ತೇನೆ. ಬರುವುದು ಒಂದೆರಡು ದಿವಸಗಳಾಗಬಹುದು ಎಂದು ಹೊರಟ. ತಾನೂ ಗೆಳತಿಯರ ಮನೆಗೆ ಹೋಗಿ ಬರುತ್ತೇನೆ ಎಂದು ಹೊರಟಿದ್ದೆ.

'ಶಾಂಭವಿ, ಎಲ್ಲಿ ಕಳೆದು ಹೋಗಿ ಬಿಟ್ಟಿದ್ದೆ. ನಮ್ಮ ಮನೆ ಬಂತು ಬಾ. ಕೇಶವಯ್ಯನ ಮನೆಯಿಂದ ಎರಡು ಬೀದಿ ದಾಟಿದರೆ ಸಂದೀಪನ ಮನೆ. ಆತನಿಗೆ ಅಪ್ಪ ಇಲ್ಲ. ಅಮ್ಮ ಒಬ್ಬಳೇ. ಒಬ್ಬನೇ ಮಗ ಸಂದೀಪ. ಚೂರು ಪಾರು ತೋಟ, ಗದ್ದೆ ಇದೆ. ಸಂದೀಪ ಒಂದು ಖಾಸಗಿ ಕಂಪನಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದಾನೆ. ಆತ ದುಡಿಮೆ, ತೋಟದ ಆದಾಯದಿಂದ ಜೀವನಕ್ಕೇನೂ ಕೊರತೆಯಿಲ್ಲ. ಕಳೆದ ಕೆಲವು ವರ್ಷಗಳಿಂದ ಆತ ಶಾಂಭವಿಯ ಹಿಂದೆ ಬಿದ್ದಿದ್ದ. ಆದರೆ ಶಾಂಭವಿ ಶ್ಯಾಮ್ ನ ಗುಂಗಿನಲ್ಲಿ ಸಂದೀಪ ನ ಪ್ರೀತಿಗೆ ಉಪ್ಪು ಸೊಪ್ಪು ಹಾಕಿರಲಿಲ್ಲ.

ಪ್ರೀತಿಯಿಂದ ಶಾಂಭವಿಯನ್ನು ಮನೆಯೊಳಗೇ ಬರ ಮಾಡಿಕೊಂಡಳು ಸಂದೀಪನ ಅಮ್ಮ.

ಇತ್ತ ಮೂರ್ನಾಲ್ಕು ದಿವಸ ಕಳೆದ ಮೇಲೆ ಮನೆಗೆ ಬಂದ ಶ್ಯಾಮ್. ಕಳೆಗುಂದಿದ ತನ್ನ ಅಪ್ಪ ಕೇಶವಯ್ಯನವರ ಮುಖ ನೋಡಿದ ಶ್ಯಾಮ್. ತನ್ನ ಅಪ್ಪ ಏಕೆ ಹಾಗಿದ್ದಾರೆಂದು ತಕ್ಷಣವೇ ಅರ್ಥ ಮಾಡಿಕೊಂಡಿದ್ದ ಶ್ಯಾಮ್.

'ಅಪ್ಪಾ, ಏಕೆ ಬೇಸರದಿಂದಿರುವಿರಿ ??' ಎಂದು ಕೇಳಿದ.

'ಎಲ್ಲಾ ಮಣ್ಣು ಪಾಲಾಯಿತು ಮಗನೇ. ಶಾಂಭವಿ ನಮಗೆಲ್ಲ ಮೋಸ ಮಾಡಿ ಬೇರೆಯವರನ್ನು ಮದುವೆ ಮಾಡಿಕೊಂಡು ಬಿಟ್ಟಳು ಶ್ಯಾಮ್. ನೀನು ಈ ಆಘಾತವನ್ನು ಹೇಗೆ ಸಹಿಸುತ್ತೀಯೋ ಏನೋ? ಆಗಿದ್ದಾಯಿತು. ಸಮಾಧಾನ ಮಾಡಿಕೊ. ಆಕೆಗಿಂತಲೂ ಒಳ್ಳೆಯ ಹುಡುಗಿಯನ್ನು ಹುಡುಕಿ ನಿನಗೆ ಮದುವೆ ಮಾಡುತ್ತೇನೆ. ನೀನು ಈಗಲೇ ಅಮೆರಿಕಾಕ್ಕೆ ಹೊರಡು. ಇಲ್ಲೇ ಇದ್ದರೆ ನಿನಗೆ ಮತ್ತೂ ದುಃಖವಾಗುತ್ತದೆ. ನೀನು ಮತ್ತೊಮ್ಮೆ ಇಂಡಿಯಾ ಕ್ಕೆ ಬರುವವರೆಗೆ ನಿನಗೆ ಅನುರೂಪಳಾದ ಹುಡುಗಿಯನ್ನು ಹುಡುಕಿ ಇಟ್ಟಿರುತ್ತೇನೆ 'ಎಂದರು ಕೇಶವಯ್ಯ.

ರೋಗಿ ಬಯಸಿದ್ದುವು ಹಾಲು ಅನ್ನ ! ವೈದ್ಯರು ಹೇಳಿದ್ದೂ ಹಾಲು ಅನ್ನ!! ಎಂಬಂತಾಯಿತು ಶ್ಯಾಮ್ ಗೆ. ಸರಿ ಅಪ್ಪಾ, ನಾಳೇನೇ ನಾನು ಅಮೆರಿಕಾಕ್ಕೆ ಹೊರಡ್ತೀನಿ ಎಂದ. ಅದರಂತೆ ಹೊರಟಿಯೂ ಬಿಟ್ಟ.

ಕೇಶವಯ್ಯನವರಿಗೆ ತಲೆ ಕೆಟ್ಟಂತಾಗಿತ್ತು. ಗುಣವಂತೆ, ಶೀಲವಂತೆ ಎಂದು ತಾನು ಅಂದುಕೊಂಡಿರುವ ಶಾಂಭವಿ ಮೋಸ ಮಾಡಿದ ವಿಷಯ ಕೇಶವಯ್ಯನವರಿಗೆ ಅರಗಿಸಿಕೊಳ್ಳಲು ಆಗಲಿಲ್ಲ. ಶಾಂಭವಿಯ ಕೋಣೆಯತ್ತ ದೃಷ್ಟಿ ಹಾಯ್ದರೆ ಸಾಕು ! ಅವರ ಕೋಪ ನೆತ್ತಿಗೇರುತ್ತಿತ್ತು. ಶಾಂಭವಿಯ ರೂಮಿನಲ್ಲಿರುವ ಆಕೆಯ ವಸ್ತುಗಳನ್ನೆಲ್ಲ ಆಕೆ ಸಂದೀಪನ ಜೊತೆ ಮದುವೆಯಾದ ಬಂದ ಕ್ಷಣವೇ ಹೊರಗಡೆ ಬಿಸಾಕಿದ್ದರು. ಆದರೂ ಕಣ್ತಪ್ಪಿ ಏನಾದರೂ ಇದೆಯೇ ನೋಡಬೇಕು. ಒಂದು ವೇಳೆ ಇದ್ದರೆ ಅದನ್ನು ಸುಟ್ಟು ಹಾಕಿ ಬಿಡಬೇಕೆಂದು ಶಾಂಭವಿಯ ರೂಮಿಗೆ ಹೋದರು ಕೇಶವಯ್ಯ.

ಗೋಡೆಯ ಮೇಲೆ ನಗುತ್ತಿರುವ ಶಾಂಭವಿಯ ಫೋಟೋ ನೇತಾಡುತ್ತಿತ್ತು. ಸಿಟ್ಟಿನಿಂದ ಗೋಡೆಯಿಂದ ಆ ಫೋಟೋವನ್ನು ಕಿತ್ತು ನೆಲಕ್ಕೆ ಬಿಸಾಕಿದರು ಕೇಶವಯ್ಯ. ಫೋಟೋದ ಗ್ಲಾಸು ಚೂರು ಚೂರಾಯಿತು. ಆಕಸ್ಮಾತ್ತಾಗಿ ಗ್ಲಾಸಿನ ಚೂರಿನ ಮೇಲೆ ಕಾಲಿಟ್ಟರು. ಅವರಿಗರಿವಿಲ್ಲದಂತೆ ಹಾಯ್ ಎಂದರು ಕೇಶವಯ್ಯ. ಇಷ್ಟೊಂದು ಸಹಿಸಲಾರದ ನೋವು ಕೊಟ್ಟು ಹೋಗಿದ್ದಾಳೆ ಆಕೆ. ಇದೇನು ಮಹಾ ಎಂದೆನಿಸಿತು ಕೇಶವಯ್ಯನವರಿಗೆ !! ವಿಷಾದದ ನಗು ಬಂದಿತು ಕೇಶವಯ್ಯನವರಿಗೆ. ಕೆಳಗಡೆ ಬಿದ್ದು ಹೋದ ಫೋಟೋದ ಪಕ್ಕದಲ್ಲೇ ಒಂದು ಪುಸ್ತಕದಂತಹ ವಸ್ತು ಕಾಣಿಸಿತು.

ಗೋಡೆಯ ಮೇಲಿರುವ ಫೋಟೋದ ಹಿಂದೆ ಇತ್ತು ಅಂತ ಕಾಣುತ್ತೆ. ಏನದು ಎಂದು ಕುತೂಹಲದಿಂದ ಅದನ್ನು ಕೈಗೆತ್ತಿಕೊಂಡರು ಕೇಶವಯ್ಯ. ನೋಡಿದರೆ ಅದು ಶಾಂಭವಿ ತನ್ನ ಮುಖ್ಯವಾದ ಘಟನೆಗಳನ್ನು ಬರೆದಿಟ್ಟಿರುವ ಡೈರಿ! ತನಗೆ ಬುದ್ಧಿ ಬಂದಾಗಿನಿಂದ ತನ್ನ ಜೀವನದಲ್ಲಿ ನಡೆದ ಕೆಲವು ವಿಚಾರಗಳನ್ನು ಅದರಲ್ಲಿ ಬರೆದಿಟ್ಟಿದ್ದಳು ಶಾಂಭವಿ. ಇವಳ ದಿನಚರಿಯೆಲ್ಲ ಗೊತ್ತಿದ್ದದ್ದೆ. ಮತ್ತೇನು ಓದುವುದು ಎಂದು ಅಂದುಕೊಂಡರೂ ತಡೆಯಲಾರದೇ ಕೊನೆಯ ಪುಟದ ಮೇಲೆ ಕಣ್ಣಾಡಿಸಿದರು ಕೇಶವಯ್ಯ.

ಕೇಶವಯ್ಯನವರ ಕಣ್ಣಿನಿಂದ ದಳದಳನೆ ನೀರು ಹರಿಯಲು ಪ್ರಾರಂಭವಾಯಿತು. ತಾನೇನು ಕನಸು ಕಾಣುತ್ತಿಲ್ಲವೆಂದು ದೃಢಪಡಿಸಿಕೊಂಡು ಮತ್ತೊಮ್ಮೆ ಆ ಪುಟ ಓದಿದರು.



ವಿಷಯ ಗೊತ್ತಿಲ್ಲದೇ ಶಾಂಭವಿಯ ಮೇಲೆ ಅವಾಚ್ಯ ಶಬ್ದಗಳಿಂದ ಅದೆಷ್ಟು ನಿಂದಿಸಿದೆ ! ಆದರೂ ಮರು ಮಾತಾಡದೆ ಹೊರಟೇ ಬಿಟ್ಟಳು. ಇಲ್ಲಾ, ನಾನು ತಪ್ಪು ಮಾಡಿಬಿಟ್ಟೆ. ಈಗಲೇ ಶಾಂಭವಿಯ ಮನೆಗೆ ಹೋಗಿ ಆಕೆಯ ಕ್ಷಮೆ ಕೇಳಲೇಬೇಕು. ತನ್ನ ಮಗ ಮಾಡಿದ ಘನಂದಾರಿ ಕೆಲಸ ತನ್ನನ್ನು ಶಾಂಭವಿಯ ಮುಂದೆ ತಲೆ ಎತ್ತಲಾರದಂತೆ ಮಾಡಿದೆ. ಆದರೂ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಳ್ಳಲೇಬೇಕು ! ತನ್ನ ಟ್ರಂಕಿನಿಂದ ಒಂದು ಚಿಕ್ಕ ಬಾಕ್ಸ್ ನ್ನು ಹೊರಗೆ ತೆಗೆದರು. ಅದನ್ನು ಕೈಯಲ್ಲಿ ಹಿಡಿದುಕೊಂಡು ಮನೆಯಿಂದ ಹೊರಗೆ ನಡೆದರು.

ಯಾರೋ ಶಾಂಭವಿ ಎಂದು ಕರೆದದ್ದು ಕೇಳಿ ಹೊರಗೆ ಬಂದಳು ಶಾಂಭವಿ.

'ಮಾವಯ್ಯಾ, ನೀವಾ? ಅಲ್ಲೇ ಏಕೆ ನಿಂತಿದ್ದೀರಿ. ಬನ್ನಿ ಒಳಗೆ. ಅತ್ತೇ, ನನ್ನ ಮಾವಯ್ಯ ಬಂದಿದ್ದಾರೆ.' ಎಲ್ಲಿಲ್ಲದ ಸಂಭ್ರಮ ಶಾಂಭವಿಗೆ. '

ಕೇಶವಯ್ಯನವರೇ ಮಾತು ಆರಂಭಿಸಿದರು.

'ಶಾಂಭವಿ, ನನ್ನನ್ನು ಕ್ಷಮಿಸು ಎಂದು ಹೇಳುವ ಧೈರ್ಯ ನನಗಿಲ್ಲ. ಮಗಳೇ, ತೆಗೆದುಕೋ ಇದನ್ನು. ನಿನ್ನ ಅತ್ತೆ ತನ್ನ ಮನೆಗೆ ಬರುವ ಸೊಸೆಗಾಗಿ ಮಾಡಿಸಿಟ್ಟ ಮುತ್ತಿನ ಹಾರ. ಇದನ್ನು ನೀನು ತೆಗೆದುಕೋ '

'ಮಾವಯ್ಯ, ಇದು ಶ್ಯಾಮನ ಪತ್ನಿಗೆ ಸೇರಬೇಕಾದದ್ದು. ಇದನ್ನು ಆಕೆಗೇ ಕೊಟ್ಟುಬಿಡಿ ಪ್ಲೀಸ್.'

'ಇಲ್ಲ ಕಂದಾ !ನನ್ನ ಮಗನ ಮದುವೆಯಾಗದಿದ್ದರೂ ನೀನು ನನ್ನ ಸೊಸೆನೇ. ಇದು ನಿನಗೆ ಸೇರಬೇಕಾದದ್ದು. ನಿನ್ನ ಅತ್ತೆಯ ಆಸೆನೂ ಇದೇ ಆಗಿತ್ತು.'

'ಇಲ್ಲ ಮಾವ ನನಗಿದು ಬೇಡ '

'ನೋಡಮ್ಮ ಶಾಂಭವಿ, ನೀನು ಇದನ್ನು ತೆಗೆದುಕೊಂಡರೆ ಮಾತ್ರ ನನ್ನ ಪಾಪಕ್ಕೆ ಪ್ರಾಯಶ್ಚಿತವಾಗುತ್ತದೆ. ಇದನ್ನು ಪ್ರೀತಿಯಿಂದ ನಿನಗೆ ಕೊಡುತ್ತಾ ಇದ್ದೇನೆ. ಇದು ಯಾವಾಗಲೂ ನಿನ್ನ ಕೊರಳಲ್ಲಿ ಇರಬೇಕು. ನಿನ್ನ ಜೀವನ ಈ ಮುತ್ತಿನ ಹಾರದಂತೆ ಲಕ ಲಕ ಹೊಳೆಯುತ್ತಾ ಇರಬೇಕು.'

ಅಲ್ಲೇ ಕುಸಿದು ಬಿದ್ದರು ಕೇಶವಯ್ಯ. ತನ್ನ ಪಾಪಕ್ಕೆ ಪ್ರಾಯಶ್ಚಿತವಾಯಿತೆಂಬ ಸಂತೃಪ್ತಿಯಲ್ಲಿ ಕೇಶವಯ್ಯನವರ ಪ್ರಾಣ ಪಕ್ಷಿ ನಿಶ್ಚಿಂತೆಯಿಂದ ಹಾರಿ

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR